
ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಮತ್ತು
ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 15 ಸಂಚಿಕೆ : 1 ಪುಟ : 8 ಜುಲೈ–ಆಗಸ್ಟ್ 2019



## ಸದಾ ಅಡ್ಡಿ ಆತಂಕಗಳನ್ನೆದುರಿಸುವ ಗಾರ್ಮೆಂಟ್ಸ್ ಉದ್ಯಮದ ಕನಿಷ್ಠವೇತನ ಪರಿಷ್ಕರಣೆ

ಪ್ರತಿ 5 ವರ್ಷಕ್ಕೊಮ್ಮೆ ಕನಿಷ್ಠವೇತನವನ್ನು ಪರಿಷ್ಕರಿಸಬೇಕೆಂದು ಕನಿಷ್ಠ ವೇತನ ಕಾಯಿದೆಯು ಕಡ್ಡಾಯವಾಗಿ ಹೇಳಿದರೂ, ಕರ್ನಾಟಕದ ಗಾರ್ಮೆಂಟ್ಸ್ ಉದ್ಯಮದ ಇತಿಹಾಸದಲ್ಲಿ ಇದನ್ನು ಅನುಷ್ಠಾನ ಮಾಡಲು ಸರ್ಕಾರವು ವಿಫಲವಾಗಿದೆ. 1986, 1993, 2001, ಮತ್ತು 2014 ಹೀಗೆ ಗಾರ್ಮೆಂಟ್ಸ್ ಉದ್ಯಮಕ್ಕೆ ಕನಿಷ್ಠವೇತನ ಪರಿಷ್ಕರಣೆಯಾಗುವಾಗಲೆಲ್ಲ ಮಾಲೀಕರಿಂದ ಅಡ್ಡಿ, ಅನಗತ್ಯವಾಗಿ ಕೋರ್ಟ್ ಮೆಟ್ಟಿಲೇರುವುದರಿಂದ ವಿಳಂಬ... ಪರಿಣಾಮವಾಗಿ ಕಾರ್ಮಿಕರಿಗೆ ಅನ್ಯಾಯ... ಕನಿಷ್ಠ ವೇತನವನ್ನು ಜಾರಿಗೊಳಿಸಬೇಕಾದ ಜವಾಬ್ದಾರಿಯಿರುವ ಸರ್ಕಾರಗಳೂ ಈ ಅಡ್ಡಿ ಆತಂಕಕ್ಕೆ ಕೊಡುಗೆ ನೀಡುತ್ತವೆ. ಪ್ರಸ್ತುತ 2018 ರಲ್ಲಿಯೂ ಇನ್ನೇನು ಕನಿಷ್ಠ ವೇತನ ಹೆಚ್ಚು ಆಗೇ ಬಿಟ್ಟಿತು ಎಂದು ಒಂದು ಹಂತಕ್ಕೆ ಬಂದಾಗ ಇದ್ದಕ್ಕಿದ್ದಂತೆ ಎದುರಾಯಿತು ಅಡ್ಡಿ!!! ಏನದು?

2018ರಲ್ಲಿ ಜನವರಿಯಲ್ಲಿ ಕನಿಷ್ಠವೇತನ ಪರಿಷ್ಕರಣೆ ಆಗುತ್ತಿದೆ ಎಂಬ ಸುಳಿವು ಸಿಕ್ಕ ಕೂಡಲೇ, ಕರ್ನಾಟಕದ ಅತಿ ದೊಡ್ಡ ಗಾರ್ಮೆಂಟ್ಸ್ ಕಂಪನಿಯಾದ ಶಾಹಿ ಎಕ್ಸ್‌ಪೋರ್ಟ್ಸ್ ಪ್ರೈ.ಲಿ ಮತ್ತು ಹಿಮತ್‌ಸಿಂಗ್ ಸೀಡೆ ಪ್ರೈ ಲಿ. ರೇಮಂಡ್ಸ್ ಎಂಬ ಮತ್ತೊಂದು ಕಂಪನಿಯೊಂದಿಗೆ ಕಾರ್ಮಿಕ ಮಂತ್ರಿಗಳಿಗೆ "ಈ ಕನಿಷ್ಠವೇತನ ದರವು ಹೆಚ್ಚಾಯಿತು, ನಮಗೆ ಕೊಡಲು ಸಾಧ್ಯವಿಲ್ಲ ಇದನ್ನು ಹಿಂತೆಗೆದುಕೊಳ್ಳಬೇಕು," ಎಂದು ಆಕ್ಷೇಪ ಸಲ್ಲಿಸಿ, ಜೊತೆಗೆ ಇಲ್ಲಿಯವರೆಗೂ ಇರದ ಮತ್ತೊಂದು ವಿಷಯವನ್ನು ಸೇರಿಸಿ ಮನವಿ ಸಲ್ಲಿಸಿತು. ಅದೇನೆಂದರೆ "ಟೆಕ್ಸ್‌ಟೈಲ್ (ಸಿಲ್ಕ್), ಸ್ಪಿನ್ನಿಂಗ್‌ಮಿಲ್, ಪ್ರಿಂಟಿಂಗ್ & ಡೈಯಿಂಗ್ ಇವೆಲ್ಲವೂ ಗಾರ್ಮೆಂಟ್ಸ್‌ಗೆ ಸಂಬಂಧಿಸಿದ್ದೇ. ಆದ್ದರಿಂದ ಈ ನಾಲ್ಕೂ ಉದ್ಯಮಗಳನ್ನು "ಸಮಗ್ರ ಟೆಕ್ಸ್‌ಟೈಲ್ ಉದ್ಯಮ" ಎಂದು ಪರಿಗಣಿಸಿ ಇವು ನಾಲ್ಕಕ್ಕೂ ಒಂದೇ ವೇತನ ನಿಗದಿಪಡಿಸ ಬೇಕೆಂದು ಕೋರಿತ್ತು. ಇದರ ಹಿಂದಿನ ಉದ್ದೇಶವೇನೆಂದರೆ ಶಾಹಿ ಎಕ್ಸ್‌ಪೋರ್ಟ್ಸ್ ತನ್ನ ಶಿವಮೊಗ್ಗ ಯೂನಿಟ್‌ನಲ್ಲಿ ಗಾರ್ಮೆಂಟ್ಸ್ ಫ್ಯಾಕ್ಟರಿಯ ಜೊತೆಗೆ ಪ್ರಿಂಟಿಂಗ್ & ಡೈಯಿಂಗ್ ಮತ್ತು ಸ್ಪಿನ್ನಿಂಗ್ ಕೆಲಸ ನಡೆಸುತ್ತಿರುವುದರಿಂದ ಅದರ ಪ್ರಕಾರ ಇದೆಲ್ಲದಕ್ಕೂ ಒಂದೇ ರೀತಿಯ ವೇತನ ನಿಗದಿಯಾಗಬೇಕು. ಬೇರೆ ಬೇರೆ ವೇತನವಿದ್ದರೆ ಕಾರ್ಮಿಕರ ನಡುವೆ ಗಲಾಟೆಗಳಾಗಿ "ಕೈಗಾರಿಕಾ ಶಾಂತಿಯು" ಹಾಳಾಗುವುದೆಂಬ "ಕಾಳಜಿ" ವಹಿಸಿ ಒಟ್ಟಿನಲ್ಲಿ ಕನಿಷ್ಠವೇತನ ಪರಿಷ್ಕರಣೆಯನ್ನು ಮುಂದೂಡುವುದು!?

ಮಾಲೀಕರ ಈ ಮನವಿಯನ್ನು ಇನ್ನಿಲ್ಲದ ಆಸ್ಥೆಯೊಂದಿಗೆ ಪರಿಗಣಿಸಿದ ಸರ್ಕಾರವು (ಕಾರ್ಮಿಕ ಮಂತ್ರಿಗಳು, ಕಾರ್ಮಿಕ ಕಾರ್ಯದರ್ಶಿಗಳು) ಒಂದೇ ದಿನದಲ್ಲಿ ಅವರು ಹೇಳಿದಂತೆ ನಾಲ್ಕೂ ಉದ್ಯಮಗಳ ಕನಿಷ್ಠವೇತನ ಆದೇಶಗಳನ್ನು ಹಿಂಪಡೆದು (ಇದರಲ್ಲಿಗಾರ್ಮೆಂಟ್ಸ್ ಬಿಟ್ಟು ಉಳಿದವು ಅಂತಿಮ ಅಧಿಸೂಚನೆಗಳು) ಹೊಸ ವೇತನ ನಿಗದಿಪಡಿಸಲು ಹೊಸ ಸಮಿತಿ ರಚಿಸಿತು. ಹಿಂಪಡೆಯಲು ಕಾರ್ಮಿಕ ಇಲಾಖೆಯು ನೀಡಿದ ಕಾರಣವೆಂದರೆ,

1. ನಾಲ್ಕೂ ಶೆಡ್ಯೂಲ್ಡ್ ಉದ್ಯಮಗಳೂ ಒಂದೇ ಸ್ವರೂಪದವಾಗಿದ್ದು, ಅವುಗಳಿಗೆ ನಿಗದಿಯಾಗಿರುವ ವೇತನ ದರದಲ್ಲಿ ವ್ಯತ್ಯಾಸಗಳಿದ್ದು, ಇದು ಉದ್ಯಮದಲ್ಲಿ ಅಶಾಂತಿ ಉಂಟುಮಾಡುತ್ತದೆ.

2. ಈ ಮಟ್ಟದ ವೇತನ ನೀಡಲು ಮ್ಯಾನೇಜ್‌ಮೆಂಟ್‌ಗಳಿಗೆ ಕಷ್ಟವಾಗುತ್ತದೆ.

ಇದರಲ್ಲಿ ಮೊದಲನೆಯ ಕಾರಣವಂತೂ ಹಸೀ ಸುಳ್ಳಾಗಿದ್ದು, ನಾಲ್ಕೂ ಉದ್ಯಮಕ್ಕೆ ನಿಗದಿ ಪಡಿಸಿದ ವೇತನದಲ್ಲಿ ಒಂದು ಪೈಸೆಯೂ ವ್ಯತ್ಯಾಸವಿರಲಿಲ್ಲ.

ಎರಡನೆಯದಂತೂ ಸ್ವತಃ ಸರ್ಕಾರ ನೀಡುವ ಕಾರಣ ಅಲ್ಲವೇ ಅಲ್ಲ. ಏಕೆಂದರೆ ನ್ಯಾಯಾಲಯಗಳೇ, ಕನಿಷ್ಠವೇತನ ನೀಡಲಾಗಿದಿದ್ದರೆ ಉದ್ಯಮ ನಡೆಸುವುದು ಸೂಕ್ತವಲ್ಲ, ಕನಿಷ್ಠವೇತನ ನಿರಾಕರಣೆಯು ಮೂಲಭೂತ ಹಕ್ಕಿನ ಉಲ್ಲಂಘನೆ ಎಂದು ಹೇಳಿದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಕನಿಷ್ಠ ವೇತನವನ್ನು ನಿಗದಿಪಡಿಸಿರುವುದು 'ಶಾಂತಪ್ಪ ಕಮಿಟಿ'ಯ ವರದಿಯ ಆಧಾರದಲ್ಲಿಯೆ ಹೊರತು, ಯಾರದೋ ಮನಸೋ ಇಚ್ಛೆ ಅಲ್ಲ. ಗಾರ್ಮೆಂಟ್ಸ್ ಕಾರ್ಮಿಕರೊಬ್ಬರು ಗೌರವಯುತವಾಗಿ ಬದುಕಲು ಈ ವೇತನದಿಂದ ಅಸಾಧ್ಯವಾಗಿರುವಾಗ, ಮ್ಯಾನೇಜ್‌ಮೆಂಟ್ ಈ ವೇತನ

*(ಮುಂದಿನ ಪುಟಕ್ಕೆ)*

Scanned with OKEN Scanner

ಕೊಡುವಷ್ಟು ಸಾಮರ್ಥ್ಯ ಇಲ್ಲ ಎಂಬ ಹೇಳಿಕೆಯು ಸುಳ್ಳಾಗುತ್ತದೆ. ಆದರೂ ಸರ್ಕಾರವು ಈ ನೆಪಗಳ ಕಾರಣ ನೀಡಿ, ತನ್ನ ಅಧಿಕಾರವನ್ನು ಬಳಸಿ ಅಧಿಸೂಚನೆಗಳನ್ನು ಹಿಂಪಡೆಯಿತು. ಇದರಲ್ಲಿ ಲಕ್ಷಾಂತರ ಕಾರ್ಮಿಕರ ಹಿತಾಸಕ್ತಿಗೆ ಹೊಡೆತ ಬೀಳುತ್ತದೆ ಎಂಬ ಗಮನವೂ ಕಾರ್ಮಿಕ ಅಧಿಕಾರಿಗಳಿಗೆ ಇರಲಿಲ್ಲ.

ಸರ್ಕಾರದ ಈ ಕ್ರಮದ ವಿರುದ್ಧ ಎಐಟಿಯುಸಿ ಮತ್ತು ಎಐಸಿಸಿಟಿಯು ಸಂಘಟನೆಗಳು GATWU ನ್ಯಾಯಾಲಯದಲ್ಲಿ ಪ್ರಶ್ನಿಸಬೇಕೆಂದು GATWU ಆ ಸಂಘಟನೆಗಳಲ್ಲಿ ಮನವಿ ಮಾಡಿಕೊಂಡಿತ್ತು. ಪರಿಣಾಮವಾಗಿ ಈ ಕೇಸ್‌ಗೆ ಸಂಬಂಧಿಸಿಂತೆ, ಉಚ್ಚನ್ಯಾಯಾಲಯದ ಏಕಸದಸ್ಯ ಪೀಠವು, ಸರ್ಕಾರದ ಈ ಕ್ರಮವು ಸಮರ್ಥನೀಯವಲ್ಲವೆಂದೂ, ಇನ್ನು ಆರು ತಿಂಗಳ ಒಳಗಾಗಿ ಹೊಸ ಸಮಿತಿಯೊಂದನ್ನು ರಚಿಸಿ ಕನಿಷ್ಠವೇತನ ಪರಿಷ್ಕರಿಸಬೇಕೆಂದೂ ಸರ್ಕಾರಕ್ಕೆ ಆದೇಶಿಸಿದೆ. ಆ ಪ್ರಕ್ರಿಯೆಯನ್ನು ಸರ್ಕಾರವು ಈಗ ಪ್ರಾರಂಭಿಸಬೇಕಿದೆ.

ಒಟ್ಟಿನಲ್ಲಿ ಗಾರ್ಮೆಂಟ್ಸ್ ಮ್ಯಾನೇಜ್‌ಮೆಂಟ್‌ನ ಹುಸಿ ಕಾಳಜಿ ಮತ್ತು ಸರ್ಕಾರದ ಸುಳ್ಳು ನೆಪದಿಂದ 2018 ರಲ್ಲೇ ಪರಿಷ್ಕರಣೆಯಾಗಬೇಕಿದ್ದ ಕನಿಷ್ಠವೇತನವು ಈಗಾಗಲೇ ಒಂದೂವರೆ ವರ್ಷ ತಡವಾಗಿದ್ದರಿಂದ ಕಾರ್ಮಿಕರಿಗೆ ಅಪಾರ ನಷ್ಟವಾಯಿತು, ಮಾಲೀಕರಿಗೆ ನೂರಾರು ಕೋಟಿ ಲಾಭವಾಯಿತು ಎಂಬುದಂತೂ ಕನ್ನಡಿಯಷ್ಟು ಸ್ಪಷ್ಟ.

ಕನಿಷ್ಠವೇತನದ ಉದ್ದೇಶ ಮತ್ತು ಇದನ್ನು ಕುರಿತು ನ್ಯಾಯಾಲಯಗಳ ಅಭಿಪ್ರಾಯಗಳು ಗಾರ್ಮೆಂಟ್ಸ್ ಉದ್ಯಮದ ಕನಿಷ್ಠವೇತನದ ಪರಿಷ್ಕರಣೆಯು ಸದಾ ಅಡ್ಡಿಗೊಳಗಾಗುತ್ತಿರುವ ಈ ಸಂದರ್ಭದಲ್ಲಿ ಕನಿಷ್ಠವೇತನ ಕಾಯಿದೆಯ ಉದ್ದೇಶ ಮತ್ತು ವಿವಿಧ ಕೇಸ್‌ಗಳಲ್ಲಿ ನ್ಯಾಯಾಲಯಗಳು ಹೇಳಿದ ಅಭಿಪ್ರಾಯಗಳನ್ನು ಮತ್ತೊಮ್ಮೆ ಮನನ ಮಾಡಿಕೊಳ್ಳುವ ಅವಶ್ಯಕತೆಯಿದೆ.

1948ರಲ್ಲಿ ರಚನೆಯಾದ ಕನಿಷ್ಠವೇತನ ಕಾಯಿದೆಯ ಉದ್ದೇಶವು, ಜೆವರಿನ ದುಡಿಮೆ ಮತ್ತು ಶೋಷಣೆಯನ್ನು ತಡೆಗಟ್ಟುವದೇ ಆಗಿತ್ತು, ಆದ್ದರಿಂದ ಉದ್ಯಮಕ್ಕೆ ಕೊಡುವ ಸಾಮರ್ಥ್ಯ ಇದೆಯೋ ಇಲ್ಲವೋ ಎಂಬುದರ ಕಡೆ ಲಕ್ಷ್ಯ ನೀಡದೆಕಡೆ ಪಕ್ಷಕಾರ್ಮಿಕರಿಗೆ ಕನಿಷ್ಠವೇತನವಾದರೂ ಸಿಗುವಂತೆ ನೋಡಿಕೊಳ್ಳುವುದು ಪ್ರತಿಯೊಂದು ರಾಜ್ಯದ ಕರ್ತವ್ಯ. ಸಂವಿಧಾನದ ಆರ್ಟಿಕಲ್ 43 ರನ್ನು ಜಾರಿಗೊಳಿಸುವಲ್ಲಿ ಕನಿಷ್ಠವೇತನ ನಿಗದಿಯು ಮೊದಲ ಹೆಜ್ಜೆ ಅಷ್ಟೇ. ಕನಿಷ್ಠವೇತನ ಎಂದರೆ ಕಾರ್ಮಿಕರು ಬದುಕುಳಿಯಲು ಸಾಕಾಗುವಷ್ಟು ಮಾತ್ರ ಅಲ್ಲ, ಎಂಬುದು ಎಲ್ಲರೂ ಒಪ್ಪಿಕೊಂಡ ಸತ್ಯ. ಬದಲಿಗೆ ಈ ವೇತನವು ಮಹಿಳೆ ಮತ್ತು ಆಕೆಯ ಕುಟುಂಬವು ಬದುಕುಳಿಯುವುದು ಮಾತ್ರವಲ್ಲ, ಅವಳ ಆರೋಗ್ಯ, ಮಕ್ಕಳ ಶಿಕ್ಷಣ, ಕೆಲವೊಂದು ಸಂದರ್ಭದಲ್ಲಿ ಸಾರಿಗೆ ವೆಚ್ಚದಂತಹ ಮೂಲಭೂತ ಅವಶ್ಯಕತೆಗಳನ್ನು ಇದು ಪೂರೈಸುವಂತಿರಬೇಕು.

1991ರ Secretary vs. Management of Reptakos Brett and Ors ಕೇಸ್‌ಗೆ ಸಂಬಂಧಿಸಿದ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು "ಎಲ್ಲ ಕಾರ್ಮಿಕರು, ಎಲ್ಲ ಕಾಲದಲ್ಲೂ, ಯಾವುದೇ ಸಂದರ್ಭದಲ್ಲೂ ಕನಿಷ್ಠವೇತನವನ್ನು ಪಡೆದುಕೊಳ್ಳಲು ಅರ್ಹರಾಗಿರುತ್ತಾರೆ. ಕನಿಷ್ಠವೇತನ ಪಾವತಿಸಲು ಆಗದ ಮಾಲೀಕರಿಗೆ ಕೆಲಸ ಮಾಡಿಸಿಕೊಳ್ಳಲು ಹಕ್ಕಿರುವುದಿಲ್ಲ, ಜೊತೆಗೆ ಉದ್ಯಮ ಮುಂದುವರೆಸಲು ಯಾವುದೇ ಸಮರ್ಥನೆ ನೀಡುವ ಹಕ್ಕು ಇರುವುದಿಲ್ಲ". ಎಂದು ಹೇಳುತ್ತದೆ. (1991ರ Secretary vs. Management of Reptakos Brett and Ors ಕೇಸ್‌ಗೆ ಸಂಬಂಧಿಸಿದ ತೀರ್ಪು)

ಕೇರಳ ಉಚ್ಚ ನ್ಯಾಯಾಲಯವು "ಕನಿಷ್ಠವೇತನ ಎಂಬುದು ಕಾರ್ಮಿಕರು ಮತ್ತು ಮಾಲೀಕರು ನಡುವಿನ ಒಪ್ಪಂದವಲ್ಲ, ಬದಲಾಗಿ ಅದು ಕಾರ್ಮಿಕರಿಗೆ ಸಿಗಬೇಕಾದ ಶಾಸನಬದ್ಧ ಹಕ್ಕು. ಅದನ್ನು ನಿಗದಿಪಡಿಸಲು ಅಥವಾ ಪರಿಷ್ಕರಿಸಲು ವಿಫಲವಾದಲ್ಲಿ, ಅದು ಶಾಸನದ ಉಲ್ಲಂಘನೆಯಾಗುವುದು ಮಾತ್ರವಲ್ಲದೆ, ಭಾರತ ಸಂವಿಧಾನವು ನೀಡಿರುವ ಮೂಲಭೂತ ಹಕ್ಕಿನ ಉಲ್ಲಂಘನೆ ಕೂಡ" ಎಂದು ಅಭಿಪ್ರಾಯ ಪಡುತ್ತದೆ. (Planters of Kerala Vs. State [ILR 1996(3) Kerala 451] has held that)

ಸರ್ಕಾರಗಳು ಗಾರ್ಮೆಂಟ್ಸ್ ಕಾರ್ಮಿಕರಿಗೆ ಆದ ಅನ್ಯಾಯವನ್ನು ಪರಿಗಣಿಸಿ, ಉಚ್ಚ ನ್ಯಾಯಾಲಯದ ಆದೇಶವನ್ನು ತಕ್ಷಣವೇ ಜಾರಿಗೊಳಿಸಲು ಕ್ರಮ ಕೈಗೊಳ್ಳಬೇಕೆಂದು GATWU ಆಗ್ರಹಿಸುತ್ತದೆ.

■ ಪ್ರತಿಭಾ. ಆರ್

□

## ಗಾರ್ಮೆಂಟ್ಸ್ ಕಾರ್ಮಿಕರಿಗೂ ಬಜೆಟ್‌ನಲ್ಲಿ ಪಾಲು ಸಿಕ್ಕಿತು!!!

**ಪ್ರಥಮ ಬಾರಿಗೆ ಸಮ್ಮಿಶ್ರ ಸರ್ಕಾರ ಗಾರ್ಮೆಂಟ್ ಕಾರ್ಮಿಕರನ್ನು ಗುರುತಿಸಿ 2019-20 ರ ಮುಂಗಡ ಪತ್ರದಲ್ಲಿ ಗಾರ್ಮೆಂಟ್ ಕಾರ್ಮಿಕರಿಗೆ ಈ ಕೆಳಕಂಡ ಅಂಶಗಳಿಗೆ ಒಟ್ಟು ರೂ. 97.50 ಕೋಟಿ ರೂ.ಗಳ ಅನುದಾನ ನಿಗದಿ ಮಾಡಿದೆ. ಈ ಮೂಲಕ ಗಾರ್ಮೆಂಟ್ಸ್ ಕಾರ್ಮಿಕ ಸಮುದಾಯವನ್ನು ಗುರುತಿಸಿ ಅವರ ಸೌಲಭ್ಯಕ್ಕೆ ಆದ್ಯತೆ ನೀಡಿರುವುದು ಅತ್ಯಂತ ಮುಖ್ಯ ಬೆಳವಣಿಗೆಯಾಗಿದೆ.**

ಸರ್ಕಾರಗಳು ಪ್ರತಿ ಐದು ವರ್ಷಕ್ಕೆ ಬದಲಾಗುತ್ತಿರುತ್ತವೆ. ಮುಖ್ಯಮಂತ್ರಿಗಳು ಸಹ ಬದಲಾಗುತ್ತಿರುತ್ತಾರೆ, ಆದರೆ ಯಾರು ಬಡವರ ಪರವಾಗಿ, ತುಳಿತಕ್ಕೆ ಒಳಗಾಗಿರುವವರ ಪರವಾಗಿ ಕೆಲಸ ಮಾಡುತ್ತಾರೆ ಎನ್ನುವುದು ಬಹಳ ಮುಖ್ಯವಾಗುತ್ತದೆ.

ಬೆಂಗಳೂರಿನಲ್ಲಿ ಗಾರ್ಮೆಂಟ್ ಉದ್ದಿಮೆಯು 70ರ ದಶಕದಲ್ಲಿ ಪ್ರಾರಂಭವಾದವು. 80 ದಶಕದಲ್ಲಿ ಮಹಿಳಾ ಪ್ರಧಾನ ಕಾರ್ಖಾನೆಗಳಾಗಿ ಬದಲಾಗಲು ಪ್ರಾರಂಭಿಸಿದವು. ಕಾರ್ಖಾನೆಗಳ ಉದ್ದೇಶ ಒಂದೇ, ಉತ್ತಮ ಗುಣಮಟ್ಟದ ಉಡುಪನ್ನು ಕಡಿಮೆ ಕೂಲಿ ಕೊಟ್ಟು ಕಾರ್ಮಿಕರ ಕಡೆಯಿಂದ ಯಾವುದೇ ಪ್ರತಿರೋಧ ಬರದಂತೆ ಕಂಪನಿಯನ್ನು ನಡೆಸುವುದು. ಮ್ಯಾನೇಜರ್‌ಗಳು, ಮೇಲ್ವಿಚಾರಕರು ಮತ್ತು ಹೆಚ್ಚು ವೇತನ ಪಡೆಯುವವರು ಪುರುಷರು. ಗಾರ್ಮೆಂಟ್ ಕಂಪನಿಗಳಲ್ಲಿ ಮಹಿಳಾ ಕಾರ್ಮಿಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇದರಲ್ಲಿ ಮುಖ್ಯವಾದುದು ಅತ್ಯಂತ ಕಡಿಮೆ ವೇತನ. ಉದ್ಯಮಕ್ಕೆ ಕನಿಷ್ಠ ವೇತನವು 1986 ರಿಂದಲೇ ನಿಗದಿಯಾದರೂ ಸಹ 2000 ದವರೆಗೂ ಈ ಕಾರ್ಮಿಕರಿಗೆ ಕನಿಷ್ಠವೇತನ ದೊರಕುತ್ತಿರಲಿಲ್ಲ, ಸರ್ಕಾರಗಳೂ ಸಹ ಅದನ್ನು ಜಾರಿಮಾಡಲು ಪ್ರಯತ್ನಿಸಲಿಲ್ಲ. 2000ದ ನಂತರ ಅಂತರರಾಷ್ಟ್ರೀಯ ಬ್ರಾಂಡ್‌ಗಳ ಒತ್ತಡದಿಂದ ಉದ್ಯಮದಲ್ಲಿ ಕನಿಷ್ಠವೇತನ ಕಾಯಿದೆಯು ಪರಿಣಾಮಕಾರಿಯಾಗಿ ಕಾರ್ಯಗತವಾಯಿತು.

ದೇಶದ ಎರಡನೇ ಅತಿ ಹೆಚ್ಚು ವಿದೇಶ ವಿನಿಮಯವನ್ನು ತಂದು ಕೊಡುವ ಗಾರ್ಮೆಂಟ್ಸ್ ಕಾರ್ಮಿಕರಿಗೆ ಕೇಂದ್ರ ಸರ್ಕಾರಗಳಾಗಲೀ ಅಥವಾ ರಾಜ್ಯ ಸರ್ಕಾರಗಳಾಗಲೀ ತಮ್ಮ ಆಯವ್ಯಯದಲ್ಲಿ ಒಂದೇ ಒಂದು ಪೈಸೆಯಷ್ಟು ಹಣ ಮೀಸಲಾಗಿರಿಸಿರಲಿಲ್ಲ.

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ಕಾರ್ಮಿಕರನ್ನು ಸಂಘಟಿಸಲು ಪ್ರಾರಂಭಿಸಿದ ಮೇಲೆ ಕರ್ನಾಟಕದ ಸಿದ್ಧ ಉಡುಪು ಉದ್ಯಮದ ಕಾರ್ಮಿಕರ ಪರಿಸ್ಥಿತಿಯಲ್ಲಿ ಹಲವಾರು ಬದಲಾವಣೆಗಳು ಸಿಕ್ಕಿವೆ. 2002ರಿಂದಲೂ ಗಾರ್ಮೆಂಟ್ಸ್ ಕಾರ್ಮಿಕರ ವೇತನ ಹೆಚ್ಚಳ ಮತ್ತು ಇತರ ಸೌಲಭ್ಯಗಳಿಗಾಗಿ ಆಳುವ ಸರ್ಕಾರಗಳಿಗೆ ಮನವಿ ಸಲ್ಲಿಸುತ್ತಲೇಇದೆ.

ಇಷ್ಟು ವರ್ಷದ ಕೆಲಸದ ಪರಿಣಾಮದ ಫಲವಾಗಿ, 2018ರಲ್ಲಿ ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ, ಮುಖ್ಯಮಂತ್ರಿಗಳ ಆಹ್ವಾನದ ಮೇರೆಗೆ ದಿನಾಂಕ 29.01.2019 ರಂದು ಬಜೆಟ್ ಪೂರ್ವಭಾವೀ ಸಭೆಯಲ್ಲಿ ಭಾಗವಹಿಸಿತ್ತು, ಮತ್ತು ಹಲವಾರು ವಿಷಯಗಳನ್ನು ಪ್ರಸ್ತಾಪಿಸಿ, ಇದಕ್ಕೆ ಹಣ



Scanned with OKEN Scanner

ಮೀಸಲಿಡಬೇಕೆಂದು ಮನವಿ ಮಾಡಿತು. ಇದಕ್ಕೆ ತಕ್ಷಣವೇ ಸ್ಪಂದಿಸಿದ ಮಾನ್ಯ ಮುಖ್ಯಮಂತ್ರಿಗಳು ತಕ್ಷಣವೇ ಮಾಲೀಕರು ಮತ್ತು GATWU ಪ್ರತಿನಿಧಿಗಳ ಜೊತೆ ಸಭೆಯನ್ನು ಕರೆದು ಚರ್ಚಿಸಿದರು.

**GATWU ಮುಂದಿಟ್ಟ ಮುಖ್ಯವಾದ ಅಂಶಗಳು**

1. ಕಾರ್ಮಿಕರಿಗೆ ವಸತಿ ಸೌಲಭ್ಯ
2. ಸಾರಿಗೆ ಸೌಲಭ್ಯ
3. ಕಾರ್ಮಿಕ ಕಲ್ಯಾಣ ಇಲಾಖೆಯಿಂದ 5 ಲಕ್ಷದವರೆಗೂ ಅಪಘಾತ ಪರಿಹಾರ ನಿಧಿ
4. ಗಾರ್ಮೆಂಟ್ ಕಾರ್ಮಿಕರ ಮಕ್ಕಳಿಗೆ 5ನೇ ತರಗತಿಯಿಂದ ವಿದ್ಯಾರ್ಥಿ ವೇತನ ನೀಡಬೇಕು



ಹೆಚ್ಚು ಕಮ್ಮಿ GATWU ಕೇಳಿದ ಎಲ್ಲಾ ಬೇಡಿಕೆಗಳನ್ನು ಪೂರೈಸಿರುವ ಮುಖ್ಯಮಂತ್ರಿಗಳು ಕ್ರಮವಾಗಿ :

1. ಸಿದ್ಧ ಉಡುಪು ಕಾರ್ಮಿಕರಿಗೆ ಬಾಡಿಗೆ ಆಧಾರದ ವಸತಿ ಯೋಜನೆಗೆ ರೂ. 50 ಕೋಟಿ
2. ಸಿದ್ಧ ಉಡುಪು ಕಾರ್ಖಾನೆಗಳ ಮಹಿಳಾ ಕಾರ್ಮಿಕರಿಗೆ ಶಿಶುಪಾಲನಾ ಕೇಂದ್ರ, ಅಪಘಾತ ಪರಿಹಾರ, ಸಾರಿಗೆ, ಸಹಾಯ ಧನ ಮತ್ತಿತರ ಅನುಕೂಲಕ್ಕೆ ರೂ. 10 ಕೋಟಿ
3. ಸಿದ್ಧ ಉಡುಪು ಕಾರ್ಖಾನೆಗಳು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ 25,000 ಮಹಿಳಾ ಕಾರ್ಮಿಕರ ಕೌಶಲ್ಯ ಉನ್ನತೀಕರಣ ಹಾಗೂ ಅಪ್ರೆಂಟಿಸ್‌ಗಳ ತರಬೇತಿಗಾಗಿ ರೂ. 37.5 ಕೋಟಿ

ಈ ಎಲ್ಲ ಬೇಡಿಕೆಗಳಿಗೂ ಸ್ಪಂದಿಸಿದ ಸರ್ಕಾರವು ಗಾರ್ಮೆಂಟ್ಸ್ ಕಾರ್ಮಿಕರ ವಸತಿ, ಸಾರಿಗೆ, ಶಿಶುಪಾಲನಾ ಕೇಂದ್ರ, ಅಪಘಾತ ಪರಿಹಾರ, ಕೌಶಲ್ಯ ಉನ್ನತೀಕರಣ ಇವೆಲ್ಲದಕ್ಕೂ ಬಜೆಟ್ ಬಿಡುಗಡೆ ಮಾಡಿದ್ದಾರೆ.

ಈ ಅನುದಾನದ ಹಣವನ್ನು ವಿತರಣೆ ಮಾಡುವ ಹೊಣೆಯನ್ನು ಜವಳಿ ಮಂತ್ರಾಲಯಕ್ಕೆ ನೀಡಲಾಗಿದ್ದು, ಜವಳಿ ಆಯುಕ್ತರು ಮತ್ತು ಸರ್ಕಾರದ ಕಾರ್ಯದರ್ಶಿಗಳ ಮಟ್ಟದಲ್ಲಿ ಚರ್ಚೆ ನಡೆಯುತ್ತಿವೆ. ಈ ಸಂಬಂಧ ರಚನೆಯಾದ ಸಮಿತಿಯಲ್ಲಿ GATWU ಸಹ ಇದ್ದು, ಈ ಅನುದಾನವು ಸಮರ್ಥವಾಗಿ ಹಂಚಿಕೆಯಾಗುವ ನಿಟ್ಟಿನಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದೆ.

■ ಜಯರಾಮ್ ಕೆ. ಆರ್

□

## ಕಾರ್ಮಿಕ ಪರ ನ್ಯಾಯಸಮ್ಮತ ಹೋರಾಟದಲ್ಲಿ GATWU ಸಂಘಟನೆ...



ಅಮೇರಿಕದಲ್ಲಿ ಮುಖ್ಯ ಕಛೇರಿ ಹೊಂದಿರುವ ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಯಾಗಿರುವ ಎವೆರಿಡೆನ್ನಿಸನ್ ಕಾರ್ಪೊರೇಶನ್, ಬೆಂಗಳೂರಿನಲ್ಲಿ ಎವೆರಿ ಡೆನಿಸನ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ 850 ಕ್ಕೂ ಹೆಚ್ಚು ನೌಕರರೊಂದಿಗೆಕಾರ್ಯನಿರ್ವಹಿಸುತ್ತಿದೆ.

ಇದು ಮುಖ್ಯವಾಗಿ ಉಡುಪು ಮತ್ತು ಶ್ಯೂ ಉದ್ಯಮಕ್ಕೆ ಬೇಕಾಗುವ ಲೇಬಲ್‌ಗಳು, ಟ್ಯಾಗ್‌ಗಳು, ಪ್ರೈಸ್ ಟಿಕೆಟ್‌ಗಳನ್ನು ಮುದ್ರಿಸುತ್ತದೆ. ಇವುಗಳನ್ನು ಭಾರತದ ಗಾರ್ಮೆಂಟ್‌ಗಳು ಸೇರಿದಂತೆ ಹಲವು ದೇಶಗಳಿಗೆ ಪೂರೈಸುತ್ತದೆ.

ಬೆಂಗಳೂರಿನಲ್ಲಿ ಕಾರ್ಯಾಚರಿಸುತ್ತಿರುವ ಸದರಿ ಕಂಪನಿಯು ಐದಾರು ವರ್ಷಗಳಿಂದ ಸ್ಥಿರವಾದ ವ್ಯವಹಾರದೊಂದಿಗೆ ಅತ್ಯುತ್ತಮ ಆರ್ಥಿಕ ಲಾಭಗಳಿಸುತ್ತಿರುವುದಲ್ಲದೆ, ವ್ಯವಹಾರ ವಹಿವಾಟಿನಲ್ಲಿ ನಿರಂತರ ಹೆಚ್ಚಳ ಸಾಧಿಸುತ್ತಾ ಬರುತ್ತಿದೆ.

850ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುವ ಇಲ್ಲಿ (ಎವೆರಿ ಡೆನ್ನಿಸನ್‌ನಲ್ಲಿ) ವೈಟ್ ಕಾಲರ್, ಬ್ಲೂ ಕಾಲರ್, ಕಾಂಟ್ರಾಕ್ಟ್ ವರ್ಕರ್ಸ್ ಮತ್ತು ಹೆಚ್ಚುವರಿ ಕಾರ್ಮಿಕರು–ಹೀಗೆ ನಾಲ್ಕು ವರ್ಗಗಳನ್ನಾಗಿ ಬೇರ್ಪಡಿಸಿ ಒಡೆದಾಳುವ ನೀತಿಯನ್ನು ಆಡಳಿತವರ್ಗವು ಅನುಸರಿಸುತ್ತಿತ್ತು. ಏವರಿ ಡೆನಿಸನ್ ಕಂಪನಿಯಲ್ಲಿ ಖಾಯಂ ಕಾರ್ಮಿಕರು ಮಾತ್ರ 'ಎವರಿ ಡೆನಿಸನ್ ವರ್ಕರ್ಸ್ ಯೂನಿಯನ್ (ADWU)' ಎಂಬ ಕಾರ್ಮಿಕ ಸಂಘಟನೆ ರಚಿಸಿಕೊಂಡು ರಲ್ಲಿ 360 ಕಾರ್ಮಿಕರಿಗೆ ಮಾತ್ರ ವೇತನ ಒಪ್ಪಂದ ಮಾಡಿಕೊಂಡಿದ್ದರು.

*(ಮುಂದಿನ ಪುಟಕ್ಕೆ)*

ಕಂಪನಿಯಲ್ಲಿ ಸುಮಾರು 350 ಕಾರ್ಮಿಕರನ್ನು ಗುತ್ತಿಗೆಯಾಧಾರದಲ್ಲಿ ನೇಮಿಸಿಕೊಳ್ಳಲಾಗಿತ್ತು. ಆದರೆ ಒಂದು ದಿನವೂ ಸೇವೆ ಕಡಿತವಾಗದೆ 2 ವರ್ಷದಿಂದ 12 ವರ್ಷದ ವರೆಗೂ ಈ ಕಾರ್ಮಿಕರು ದುಡಿಯುತ್ತಿದ್ದರೂ ಅವರನ್ನು 'ಗುತ್ತಿಗೆ ಕಾರ್ಮಿಕರಾಗಿಯೇ' ಇರಿಸಲಾಗಿದ್ದು, ಗುತ್ತಿಗೆ ಕಾರ್ಮಿಕರ ಕಾನೂನನ್ನು ರಾಜಾರೋಷವಾಗಿಯೇ ಆಡಳಿತ ವರ್ಗವು ಉಲ್ಲಂಘಿಸಿತ್ತು. ಜೊತೆಗೆ ಕಾರ್ಮಿಕರಿಗೆ ಕೊಡುವ ಸೌಲಭ್ಯದಲ್ಲಿ ಖಾಯಂ ಕಾರ್ಮಿಕರು ಮತ್ತು ಗುತ್ತಿಗೆ ಕಾರ್ಮಿಕರ ನಡುವೆ ಅಪಾರ ತಾರತಮ್ಯವನ್ನು ಮಾಡುತ್ತಿತ್ತು. 2017ರ ಜನವರಿಯಿಂದ ಜೂನ್‌ನ ಅವಧಿಯಲ್ಲಿ ಸುಮಾರು 100 ಗುತ್ತಿಗೆ ಕಾರ್ಮಿಕರನ್ನು ಇದ್ದಕ್ಕಿದ್ದಂತೆ ಕೆಲಸದಿಂದ ತೆಗೆದುಹಾಕಿತ್ತು. ಇಷ್ಟೆಲ್ಲ ಆದರೂ ಖಾಯಂ ಕಾರ್ಮಿಕರ 'ಎವರಿ ಡೆನಿಸನ್ ವರ್ಕರ್ಸ್ ಯೂನಿಯನ್' ಗುತ್ತಿಗೆ ಕಾರ್ಮಿಕರ ಕಡೆಗೆ ಗಮನ ಹರಿಸಿರಲಿಲ್ಲ.

ಈ ಸಂದರ್ಭದಲ್ಲಿ, ಕರ್ನಾಟಕದ ಗಾರ್ಮೆಂಟ್ಸ್ ಉದ್ಯಮದಲ್ಲಿ ದುಡಿಯುತ್ತಿರುವ 5 ಲಕ್ಷಕ್ಕೂ ಹೆಚ್ಚಿನ ವಲಸಿಗ, ಬಡ, ಮಹಿಳಾ ಮತ್ತು ಪುರುಷ ಕಾರ್ಮಿಕರು ಕೆಲಸ ಮಾಡುವ ಸ್ಥಳದಲ್ಲಿ ಸುರಕ್ಷತೆ, ಮೂಲಸೌಕರ್ಯ, ಹೆಚ್ಚಿನ ವೇತನ, ಸಮಾನ ಕೆಲಸಕ್ಕೆ ಸಮಾನ ವೇತನ ಇತ್ಯಾದಿ ಕಾನೂನು ಬದ್ಧ ಹಕ್ಕುಗಳಿಗಾಗಿ ಪಾರದರ್ಶಕತೆಯಿಂದ ಹೋರಾಟದಲ್ಲಿ ತೊಡಗಿರುವ, 2005 ರಲ್ಲಿ ಅಸ್ತಿತ್ವಕ್ಕೆ ಬಂದಿರುವ, ಕಾರ್ಮಿಕರು ನೀಡುವ ಅತ್ಯಲ್ಪ ಶುಲ್ಕದಲ್ಲೇ ಖರ್ಚು-ವೆಚ್ಚಗಳನ್ನು ಸರಿದೂಗಿಸಿಕೊಂಡು ಪ್ರಾಮಾಣಿಕ ಹೋರಾಟದಲ್ಲಿ ನಿರತವಾಗಿರುವ, ರಾಷ್ಟ್ರೀಯ ಮಟ್ಟದಲ್ಲಿ NTUI ಗೆ ಅಫಿಲೆಯೇಟ್ ಆಗಿರುವ "ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್-GATWU" ಅಡಿಯಲ್ಲಿ 270 ಕ್ಕೂ ಅಧಿಕ ಸಂಖ್ಯೆಯ ಗುತ್ತಿಗೆ ಕಾರ್ಮಿಕರು ಸದಸ್ಯರಾಗಿ ಗುರುತಿಸಿಕೊಂಡರು.

ಗುತ್ತಿಗೆ ಕಾರ್ಮಿಕರು "ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್-GATWU"ನಲ್ಲಿ ಗುರುತಿಸಿಕೊಂಡ ಬಳಿಕ ಮಾಡಿದ ಮೊದಲ ಪ್ರಯತ್ನವೆಂದರೆ: ಇಲ್ಲಿ (ಎವೆರಿ ಡೆನ್ನಿಸನ್‌ನಲ್ಲಿ) ಹತ್ತು-ಹನ್ನೆರಡು ವರ್ಷಗಳಿಂದ ಕಾನೂನು ಬದ್ಧವಾಗಿ ಸಿಗಬೇಕಾದ ಕನಿಷ್ಠ ವೇತನ, ಸವಲತ್ತುಗಳನ್ನು ಪಡೆಯದೆ ಪರಕೀಯವಾಗಿ ಅಸಹಾಯಕತೆಯಿಂದ ಕೆಲಸ ಮಾಡುತ್ತಿದ್ದ 350ಕ್ಕೂ ಹೆಚ್ಚು ಗುತ್ತಿಗೆ ಕಾರ್ಮಿಕರು ಅನುಭವಿಸುತ್ತಿದ್ದ ತಾರತಮ್ಯ, ಅನ್ಯಾಯಗಳ ನಿವಾರಣೆಗೆ ಪ್ರಯತ್ನಿಸಿ ಅವರನ್ನು ಖಾಯಂಗೊಳಿಸಿಕೊಳ್ಳುವಂತೆ ಆಡಳಿತವರ್ಗದ ವಿರುದ್ಧ ದಿಟ್ಟ ಹೋರಾಟ ನಡೆಸಲಾಗಿತ್ತು. ಈ ಹೋರಾಟಕ್ಕೆ ಅಂತರರಾಷ್ಟ್ರೀಯ ಗ್ರಾಹಕರ ಸಂಘಟನೆಗಳೂ ಅಭೂತಪೂರ್ವ ಬೆಂಬಲ ಸೂಚಿಸಿದವು.

ಇದರ ಫಲವಾಗಿ, 350ಕ್ಕೂ ಹೆಚ್ಚು ಗುತ್ತಿಗೆ ಕಾರ್ಮಿಕರ ಪೈಕಿ ಅನಾಮತ್ತು 110 ಕಾರ್ಮಿಕರನ್ನು ಖಾಯಂ ನೌಕರರನ್ನಾಗಿ ನೇಮಕ ಗೊಳಿಸುವುದರಲ್ಲಿ GATWU ಯಶಸ್ವಿಯಾಯಿತು. ಜೊತೆಗೆ ಗುತ್ತಿಗೆ ಕಾರ್ಮಿಕರು ಮತ್ತು ಖಾಯಂ ಕಾರ್ಮಿಕರ ನಡುವೆ ವೇತನ, ಬೋನಸ್, ಸಮವಸ್ತ್ರ, ಹಬ್ಬದ ಕೊಡುಗೆ (ಗಿಫ್ಟ್), ಸುರಕ್ಷತಾ ಪಾದರಕ್ಷೆ, ರಜಾ ಸೌಲಭ್ಯ ವಂಚನೆ, ಪಿ.ಎಫ್, ಗ್ರಾಚ್ಯುಯಿಟಿ ಮುಂತಾದ ಸೌಕರ್ಯದಲ್ಲಿ ತಾರತಮ್ಯ ಮಾಡುತ್ತಿದ್ದುದರ ವಿರುದ್ಧ ದನಿ ಎತ್ತಿದ್ದು; ಕಂಪನಿಯು ಉತ್ತಮ ಲಾಭದಲ್ಲಿದ್ದರೂ ಕಾರ್ಮಿಕರಿಗೆ ನೀಡುತ್ತಿದ್ದ ಅತಿ ಕಡಿಮೆ ಬೋನಸ್ ಹಣವನ್ನು 20% ಕೊಡಬೇಕೆಂದು ಆಗ್ರಹಿಸಿದ್ದು ಇವೆಲ್ಲದ ಬಗ್ಗೆಯೂ GATWU ನಿರಂತರ ಹೋರಾಟ ರೂಪಿಸಿತು.

ಪರಿಣಾಮವಾಗಿ 350 ಖಾಯಂ ಕಾರ್ಮಿಕರು 2018 ರಜುಲೈ ನಲ್ಲಿ ADWUನ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ GATWU ವಿಗೆ ಸ್ವಇಚ್ಛೆಯಿಂದ ಸದಸ್ಯರಾದರು. ನಂತರ ನಡೆದ ಆದ ಬದಲಾವಣೆ ಮತ್ತು ಬೆಳವಣಿಗೆಗಳು ಅಪಾರ. ಹತ್ತು ಹನ್ನೆರಡು ವರ್ಷಗಳಿಂದ ಕಂಪನಿಯ ಖಾಯಂ ನೌಕರರ ಮೂಲ ವೇತನದಲ್ಲಾಗುತ್ತಿದ್ದ (ಬೇಸಿಕ್ ಸ್ಯಾಲರಿ) ಘೋರ ಅನ್ಯಾಯವನ್ನು ಸರಿಪಡಿಸಲು ಪ್ರಯತ್ನಿಸಿ ಸಾಫಲ್ಯ ಕಂಡದ್ದು (ಹತ್ತು ವರ್ಷಕ್ಕೂ ಹೆಚ್ಚು ವರ್ಷಗಳ ಸೇವಾನುಭವದ ಖಾಯಂ ಕಾರ್ಮಿಕರಿಗೆ ಕೇವಲ 10,000 ರೂಪಾಯಿಗಳಿದ್ದ ಮೂಲ ವೇತನವನ್ನು ದಿಢೀರ್ ಆಗಿ 15,000 ರೂಪಾಯಿಗಳಿಗೆ ಹೆಚ್ಚಿಸಿದ್ದು);

ಬಹುಮುಖ್ಯವಾಗಿ "ಕಾರ್ಮಿಕ ಸಂಘಟನೆ ಎಂದರೇನು, ಕಾರ್ಮಿಕ ಸಂಘಟನೆ ಹೇಗಿರಬೇಕು, ನಾಯಕ, ನಾಯಕತ್ವಕ್ಕೆ ಬೇಕಾದ ಅರ್ಹತೆಗಳೇನು? ನಾಯಕ ಆಡಳಿತ ವರ್ಗದ ಜೊತೆ ಹೇಗೆ ನಡೆದುಕೊಳ್ಳಬೇಕು, ಹೇಗೆ ಸಂವಹನ ಮಾಡಬೇಕು?, ಕಾರ್ಮಿಕರ ಹಕ್ಕುಗಳು, ಸೌಲಭ್ಯಗಳು, ಕರ್ತವ್ಯಗಳೂ ಸೇರಿದಂತೆ ಸಮಸ್ತ ಕಾನೂನುಗಳ ಅರಿವು ಮೂಡಿಸುವುದಕ್ಕಾಗಿ ಸಂಪನ್ಮೂಲ ವ್ಯಕ್ತಿಗಳು, ನುರಿತ ತಜ್ಞರು, ಪರಿಣಿತರನ್ನು ಆಹ್ವಾನಿಸಿ, ವಿವಿಧ ಸ್ಥಳಗಳಲ್ಲಿ ತರಬೇತಿ ಕಾರ್ಯಗಾರಗಳನ್ನು ಆಯೋಜಿಸಿ ನಮ್ಮಂಥ ಸಾಮಾನ್ಯ ಕಾರ್ಮಿಕರನ್ನು ಸಹ ತರಬೇತುಗೊಳಿಸಿ ಆತ್ಮವಿಶ್ವಾಸ ತುಂಬಿ 'ನಾಯಕ'ರನ್ನಾಗಿ ರೂಪಿಸುವ ಮಹತ್ವದ ಕಾರ್ಯವನ್ನು GATWU ಸಂಘಟನೆ ಮಾಡಿತು. ಇದು ಕಾರ್ಮಿಕ ವಲಯದಲ್ಲಿ ಜನ ಜನಿತ ಸಂಗತಿಯಾಗಿದೆ.

**ಎವರಿ ಡೆನಿಸನ್ ಆಡಳಿತವರ್ಗಕ್ಕೆ, GATWU ಕಾರ್ಮಿಕರು ಇಟ್ಟ ಮುಖ್ಯ ಬೇಡಿಕೆಗಳೇನೆಂದರೆ :**

- **ಕನಿಷ್ಠವೇತನ ಪಾವತಿಯಲ್ಲಿ ಲೋಪವಾಗಿದ್ದು, ಅದಕ್ಕೆ ಪರಿಹಾರ ನೀಡಬೇಕು.**
- **ಎಲ್ಲ ಗುತ್ತಿಗೆ ಕಾರ್ಮಿಕರನ್ನು ಖಾಯಂಗೊಳಿಸಬೇಕು.**
- **ಕಾನೂನು ಬಾಹಿರವಾಗಿ ವಜಾಗೊಳಿಸಿರುವ ಕಾರ್ಮಿಕರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕು.**
- **GATWU ವನ್ನು ಕಾರ್ಮಿಕರ ಪ್ರತಿನಿಧಿಯನ್ನಾಗಿ ಮಾನ್ಯಮಾಡಬೇಕು.**

ಆಡಳಿತ ವರ್ಗದ ಕಾರ್ಮಿಕ ವಿರೋಧಿ ನೀತಿ ಖಂಡಿಸಿ ಮತ್ತು ಮೇಲಿನ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕಾರ್ಮಿಕರೆಲ್ಲರೂ ದಿನಾಂಕ 23.10.2018 ರಿಂದ 02.11.2018 ರವರೆಗೆ, ಹನ್ನೊಂದು ದಿನಗಳ ಕಾಲ ಕಂಪನಿಯ ಊಟ-ತಿಂಡಿ-ಕಾಫೀ-ಟೀಗಳನ್ನು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದ ಪರಿಣಾಮ, ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಂಪನಿಗೆ ಉಂಟಾದ ಒತ್ತಡದ ಪರಿಣಾಮ, ಆಡಳಿತ ವರ್ಗವು ETI (Ethical Training Initiative)ಮಧ್ಯಸ್ತಿಕೆಯಲ್ಲಿ GATWU ಜೊತೆಗೆ ಮಾತುಕತೆ ನಡೆಸಲು ಒಪ್ಪಿಗೆ ಸೂಚಿಸಿತು. ಈ ಮಧ್ಯಸ್ತಿಕೆಯನ್ನು ಖ್ಯಾತ ಕಾರ್ಮಿಕ ಸಂಘಟಕರಾದ ಯುರ್ಕಿರೈನಾ ಅವರನ್ನು ಸಂಧಾನಕಾರರನ್ನಾಗಿ ನೇಮಕಗೊಂಡರು. 2018ರ ನವೆಂಬರ್‌ನಲ್ಲಿ ಮೊದಲನೇ ಸಂಧಾನ ಸಭೆಯು ದೆಹಲಿಯಲ್ಲಿ ನಡೆದಿತ್ತು. ನವೆಂಬರ್ 2018 ರಲ್ಲಿ ಮೊದಲನೇ ಸಂಧಾನ ಸಭೆ ದೆಹಲಿಯಲ್ಲಿ ನಡೆಯಿತು.

**ಈ ಸಂಧಾನ ಪ್ರಕ್ರಿಯೆಯ ಪರಿಣಾಮವಾಗಿ ದಿನಾಂಕ ಏಪ್ರಿಲ್ 25-26, 2019 ಎರಡು ದಿನಗಳು ಬೆಂಗಳೂರಿನಲ್ಲಿ ಮಹತ್ವದ ಸಭೆ ನಡೆದು, ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡು, GAWTU ಅನ್ನು ಮಾನ್ಯ ಮಾಡುವುದಾಗಿ ಆಡಳಿತ ವರ್ಗವು ಒಪ್ಪಿಕೊಳ್ಳುವ ಮೂಲಕ ಈ ಸಂಧಾನ ಯಶಸ್ವಿಯಾಗಿ ಮುಗಿಯಿತು.**

**ಇದರಿಂದ GAWTU ವಿನ ಎರಡು ವರ್ಷದ ಸುದೀರ್ಘ ನ್ಯಾಯ ಸಮ್ಮತ ಹೋರಾಟಕ್ಕೆ ಅರ್ಹಜಯ ಸಿಕ್ಕಂತಾಗಿ ಕಾರ್ಮಿಕರು (GAWTU ಸದಸ್ಯರು) ಸಂಭ್ರಮದಲ್ಲಿದ್ದಾರೆ.**

ಕೊನೆಯದಾಗಿ, ಎವೆರಿ ಡೆನ್ನಿಸನ್ ನಲ್ಲಿ ವರ್ಷಾನುಗಟ್ಟಲೆ ಕಾನೂನಿನ ಅರಿವು, ಸೌಲಭ್ಯಗಳ ಪರಿವೇ ಇಲ್ಲದೆ ನಿರಕ್ಷರಕುಕ್ಷಿಗಳಂತೆ ಕಾರ್ಯ ನಿರ್ವಹಿಸುತ್ತಿದ್ದ, ಕಾರ್ಮಿಕರನ್ನು ಸಂಘಟಿಸಿ ಅರಿವು ಮೂಡಿಸಿ ಆತ್ಮವಿಶ್ವಾಸ ತುಂಬುತ್ತಾ ಮಾರ್ಗದರ್ಶನ, ಸಲಹೆ-ಸೂಚನೆಗಳನ್ನು ನೀಡುತ್ತಾ ಕಾರ್ಮಿಕರಿಗೆ ಬೆನ್ನೆಲುಬಾಗಿ ನಿಂತಿರುವ, ಕಾರ್ಮಿಕರ ಹಿತಾಶಕ್ತಿಯೇ ಧ್ಯೇಯವೆಂದು, ಸೈದ್ಧಾಂತಿಕ ಬದ್ಧತೆಯೊಂದಿಗೆ ಕಾರ್ಯಪ್ರವೃತ್ತವಾಗಿರುವ "ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್-GAWTU" ಇನ್ನು ಮುಂದೆಯೂ ಕಾರ್ಮಿಕರ ಪರರಚನಾತ್ಮವಾಗಿ ಹೋರಾಡಲೆಂದು ಆಶಿಸೋಣ..

....ಸುಭಾನು ರಾರವಿ

# ಕಾರ್ಮಿಕರು ಮತ್ತು ಅಭಿವೃದ್ಧಿ

**ಭಾ**ರತ ಈಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುತ್ತಿದೆ, ವಿಶ್ವ ಗುರುವಾಗುವತ್ತ ಹೊರಟಿದೆ, ಎಂದೆಲ್ಲ ಎದೆಯುಬ್ಬಿಸಿ ಹೇಳುತ್ತಾ, ಪ್ರಜೆಗಳನ್ನು ನಂಬಿಸಲಾಗುತ್ತಿರುವ ಈ ಕಾಲದಲ್ಲಿ ನಿಜವಾದ ಅಭಿವೃದ್ಧಿ ಎಂದರೆ ಏನು? ಎಂಬುದನ್ನು ಕುರಿತು ಆಲೋಚಿಸುವ ಸಂದರ್ಭ ಬಂದಿದೆ. ಏಕೆಂದರೆ ಈಗ ತೋರಿಸುತ್ತಿರುವ ಅಭಿವೃದ್ಧಿಯ ಮಾದರಿ ಎಂದರೆ, ದೊಡ್ಡ ದೊಡ್ಡ ಸಿಮೆಂಟ್ ರಸ್ತೆ, ದೊಡ್ಡ ದೊಡ್ಡ ಐಷಾರಾಮಿ ಕಾರು, ಬಂಗಲೆಗಳು, ಏರುತ್ತಿರುವ ಶೇರು ಮಾರುಕಟ್ಟೆ, ನಮ್ಮ ದೇಶದ ಕೆಲವೇ ಶ್ರೀಮಂತ ಉದ್ಯಮಿಗಳು, ಅವರು ಹೂಡುತ್ತಿರುವ ಬಂಡವಾಳಗಳು, ಸೂಪರ್ ಫಾಸ್ಟ್ ಬುಲೆಟ್ ಟ್ರೈನ್, ಮಹಾನಗರಗಳ ದೊಡ್ಡ ದೊಡ್ಡ ಮಾಲ್‌ಗಳು ಇತ್ಯಾದಿಯೇ ಹೊರತು, ದೇಶದ ಒಬ್ಬ ಕಟ್ಟ ಕಡೆಯ ವ್ಯಕ್ತಿಯ ಜೀವನ ಮಟ್ಟವನ್ನು ಅಳೆಯುವುದಲ್ಲ. ಈ ನಿಟ್ಟಿನಲ್ಲಿ ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟಿರುವ, ತುಳಿತಕ್ಕೊಳಗಾಗಿರುವ, ಜನರ ದೃಷ್ಟಿಯಲ್ಲಿ ಅಭಿವೃದ್ಧಿ ಎಂದರೆ ಏನು ಎಂಬುದನ್ನು ಅರಿಯುವುದು ಬಹಳ ಮುಖ್ಯವಾಗುತ್ತದೆ.

ಇಂದಿಗೂ ಭಾರತದ ಬೆನ್ನೆಲುಬಾಗಿರುವುದು ರೈತರು ಮತ್ತು ಕಾರ್ಮಿಕರು. ಹಲವಾರು ಸಮಸ್ಯೆಗಳಿಂದ ಇಂದು ರೈತ ಹಿಂದೆಂದಿಗಿಂತಲೂ ಸಂಕಷ್ಟದಲ್ಲಿದ್ದಾನೆ. ಕಾರ್ಮಿಕರ ವಿಷಯಕ್ಕೆ ಬಂದರೆ, 1990 ರ ನಂತರ ಬದಲಾದ ಭಾರತದ ಆರ್ಥಿಕ ನೀತಿಗಳ ಪರಿಣಾಮವಾಗಿ ಇಂದು ದೇಶದ ದುಡಿಮೆಗಾರರ 93% ರಷ್ಟು ಜನ ಅಸುರಕ್ಷಿತ ಕೆಲಸದ ವಾತಾವರಣ, ಕೆಲಸದ ಅಭದ್ರತೆ, ಅತಿ ಕಡಿಮೆ ಸಂಬಳ, 8 ಗಂಟೆಗಿಂತಲೂ ಹೆಚ್ಚು ಕೆಲಸ, ಸಾಮಾಜಿಕ ಭದ್ರತೆ ಇಲ್ಲದಂತಹ ಅಸಂಘಟಿತ ವಲಯಗಳಲ್ಲಿ ದುಡಿಯುತ್ತಿದ್ದಾರೆ ಎಂದು ಅಧ್ಯಯನಗಳು ಹೇಳುತ್ತವೆ.

ದೇಶವನ್ನು ಕಟ್ಟುತ್ತಿರುವ ಬೃಹತ್ ಸಂಖ್ಯೆಯ ಈ ಕಾರ್ಮಿಕ ಸಮುದಾಯ ಈ ಪರಿಸ್ಥಿತಿಯಲ್ಲಿ ದುಡಿಯುತ್ತಿರುವಾಗ ಅಭಿವೃದ್ಧಿಯನ್ನು ಅವರದೇ ದೃಷ್ಟಿಯಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ. ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುತ್ತಿರುವ ಗಾರ್ಮೆಂಟ್ಸ್ ಉದ್ಯಮದ ಕಾರ್ಮಿಕರ ದೃಷ್ಟಿಯಲ್ಲಿ ಅಭಿವೃದ್ಧಿ ಎಂದರೆ ಏನು?

## ಯಾರು ಈ ಗಾರ್ಮೆಂಟ್ಸ್ ಕಾರ್ಮಿಕರು?

90 ರ ದಶಕದಲ್ಲಿ ಜಾಗತೀಕರಣದ ಮುಖ್ಯ ಲಕ್ಷಣವಾದ ಬಂಡವಾಳದ ಮುಕ್ತ ಹರಿಯುವಿಕೆಯ ಪರಿಣಾಮವಾಗಿ ಯುರೋಪ್ ಮತ್ತು ಅಮೆರಿಕದ ಬಂಡವಾಳಗಾರರು ಜನಸಂಖ್ಯೆ ಹೆಚ್ಚಿರುವ ದಕ್ಷಿಣ ಏಷ್ಯಾ ರಾಷ್ಟ್ರಗಳತ್ತ ಮುಖ ಮಾಡಿದರು. ಹೆಚ್ಚು ದುಡಿಮೆ ಮಾಡಿ ಕಡಿಮೆ ಕೂಲಿ ಪಡೆಯಲು ತಯಾರಿರುವ ಈ ಬೃಹತ್ ಸಂಖ್ಯೆಯ ಕಾರ್ಮಿಕ ಸಮುದಾಯದಿಂದ ತಮ್ಮ ಲಾಭವನ್ನು ದುಪ್ಪಟ್ಟು ಮಾಡಿಕೊಳ್ಳುವುದು ಅವರ ಮುಖ್ಯ ಉದ್ದೇಶ. ಇವರಲ್ಲಿ ಮುಖ್ಯವಾದವರು ಪ್ರಪಂಚದ ಅತಿ ಪ್ರತಿಷ್ಠಿತ ಗಾರ್ಮೆಂಟ್ ಬ್ರಾಂಡ್‌ಗಳ ಮಾಲೀಕರು. ಹೀಗಾಗಿಯೇ ಭಾರತದ ಗಾರ್ಮೆಂಟ್ಸ್ ಉದ್ಯಮ ಜಾಗತಿಕ ಸರಬರಾಜು ಸರಣಿ (ಗ್ಲೋಬಲ್ ಸಪ್ಲೈ ಚೈನ್)ಯಲ್ಲಿ ಅತ್ಯಂತ ಮುಖ್ಯವಾಗಿದೆ.

ಭಾರತದಲ್ಲಿ ಸುಮಾರು 35 ಲಕ್ಷ ಕಾರ್ಮಿಕರು ಈ ಗಾರ್ಮೆಂಟ್ಸ್ ಉದ್ಯಮದಲ್ಲಿ ದುಡಿಯುತ್ತಿದ್ದಾರೆ. ಕರ್ನಾಟಕದಲ್ಲಿ ಸರಿಸುಮಾರು 4 ರಿಂದ 5 ಲಕ್ಷ ಕಾರ್ಮಿಕರು ದುಡಿಯುತ್ತಿದ್ದಾರೆ. ಇವರಲ್ಲಿ 85% ರಷ್ಟು ಭಾಗ ಮಹಿಳೆಯರು. ಪುನರಾವರ್ತಿತ ಕೆಲಸಗಳನ್ನು ಮಾಡಲು ಒಪ್ಪುವ, ದಕ್ಷತೆಯಿರುವ, ಬದ್ಧತೆಯಿರುವ, ಯಾವುದಕ್ಕೂ ಪ್ರತಿಭಟಿಸದ, ಹಿಂತಿರುಗಿ ಮಾತನಾಡದ, ಸಂಘಟಿತರಾಗದ ಮಹಿಳೆಯರೇ ಈ ಉದ್ಯಮದ ಆಧಾರ. ಬಂಡವಾಳ ವ್ಯವಸ್ಥೆಯು ಅತೀ ಜಾಣತನದಿಂದ ಭಾರತೀಯ ಸಮಾಜದ ಪುರುಷಪ್ರಧಾನ ವ್ಯವಸ್ಥೆಯನ್ನು ಈ ಗಾರ್ಮೆಂಟ್ಸ್ ಉದ್ಯಮದಲ್ಲಿ ನಾಜೂಕಾಗಿ ಹಾಸುಹೊಕ್ಕಾಗಿಸಿರುವುದನ್ನು ನಾವು ನೋಡಬಹುದು. ಇಲ್ಲಿ ಕೆಲಸ ಹೇಳುವವರು ಗಂಡಸರು, ಮಾಡುವವರು ಹೆಂಗಸರು. ಹೆಂಗಸರು ಗಂಡಸರಿಗೆ ಹಿಂತಿರುಗಿ ಮಾತನಾಡುವ ಸಂಪ್ರದಾಯವೇ ಇಲ್ಲ. ಕೃಷಿ ಕೂಲಿ ಕೈ ಕೊಟ್ಟ ಸಂದರ್ಭದಲ್ಲಿ ನಗರಕ್ಕೆ ವಲಸೆ ಬಂದು ಗಾರ್ಮೆಂಟ್ಸ್‌ನ ಮೊರೆ ಹೋದ ಈ ಮಹಿಳೆಯರಿಗೆ ಹೆಚ್ಚಿನ ವಿದ್ಯಾಭ್ಯಾಸವಿಲ್ಲ, ಹೆಚ್ಚಿನ ಕೌಶಲ್ಯವಿಲ್ಲ, ಅದು ಈ ಉದ್ಯಮಕ್ಕೆ ಬೇಕಾಗಿಯೂ ಇಲ್ಲ. ಸೇರಿದಾಗ ಯಾವ ಕೆಲಸ ಮಾಡುತ್ತಿದ್ದರೋ ಕೆಲಸ ಬಿಡುವಾಗಲೂ ಅದೇ ಕೆಲಸ. ಕೆಲಸದಲ್ಲಿ ಮೇಲೇರಲು ಅವಕಾಶವೇ ಇಲ್ಲ. ಇಂತಹ ಕೆಲಸದ ವಾತಾವರಣದಲ್ಲಿ ದುಡಿಯುವ ಮಹಿಳಾ ಕಾರ್ಮಿಕರು ಸಾಮಾಜಿಕವಾಗಿಯೂ ಸಮಸ್ಯೆ ಎದುರಿಸುತ್ತಿರುವವರು. ಗಂಡ ಇಲ್ಲದವರು, ಇದ್ದರೂ ಗಂಡನ ದುಡಿಮೆಯ ಹಣ ಸಿಗದೇ ಒಬ್ಬೊಂಟಿಯಾಗಿ ಸಂಸಾರದ ಹೊಣೆ ಹೊತ್ತವರೇ ಅರ್ಧಕ್ಕಿಂತ ಹೆಚ್ಚು.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರನ್ನೂ ಸೇರಿದಂತೆ ಎಲ್ಲ ಅಸಂಘಟಿತ ಕಾರ್ಮಿಕರು ತಮ್ಮ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲೂ ಹೆಣಗಾಡುತ್ತಿದ್ದಾರೆ ಎಂಬುದು ನಾವು ಎದುರಿಸಲೇ ಬೇಕಾದ ಕಟು ಸತ್ಯ. ಶ್ರಮಕ್ಕೆ ತಕ್ಕ ಕೂಲಿ, ಪೌಷ್ಠಿಕ ಆಹಾರ, ಸೂಕ್ತ ವಸತಿ, ಉತ್ತಮ ಆರೋಗ್ಯ, ಸಾರಿಗೆ ವ್ಯವಸ್ಥೆ ಈ ಎಲ್ಲ ಮೂಲಭೂತ ಅವಶ್ಯಕತೆಗಳು ಇಂದು ಕಾರ್ಮಿಕರ ಪಾಲಿಗೆ ಗಗನ ಕುಸುಮವಾಗಿದೆ.

## ಶ್ರಮಕ್ಕೆ ತಕ್ಕ ಕೂಲಿ

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರು ಹೊಲೆಯುವ ಪ್ರತಿಷ್ಠಿತ ಬ್ರಾಂಡ್‌ನ ಉಡುಪುಗಳು ಹೊರದೇಶಗಳಲ್ಲಿ, ಅಷ್ಟೇ ಅಲ್ಲ ನಮ್ಮ ದೇಶದ ಮಾಲ್‌ಗಳ ದೊಡ್ಡ ದೊಡ್ಡ ಅಂಗಡಿಗಳಲ್ಲಿ ಸುಮಾರು 6 ರಿಂದ 7 ಸಾವಿರರೂಪಾಯಿಗೆ ಮಾರಾಟವಾಗುತ್ತದೆ. ಆದರೆ ಮಹಿಳಾ ಕಾರ್ಮಿಕರ ಶ್ರಮಕ್ಕೆ ಮಾತ್ರ ತಿಂಗಳಿಗೆ ಒಂದು ಬಟ್ಟೆಯ ಮಾರಾಟ ಬೆಲೆಯಷ್ಟೇ ಬೆಲೆ. ಈ ಹೊತ್ತಿಗೂ ಸಹ ಗಾರ್ಮೆಂಟ್ಸ್ ಉದ್ಯಮದಲ್ಲಿ ದೊರೆಯುತ್ತಿರುವ ಕನಿಷ್ಠ ವೇತನ ಕೇವಲ 8300 ರೂ. ಗಳು ಮಾತ್ರ. ಗಾರ್ಮೆಂಟ್ಸ್ ಕಾರ್ಮಿಕರ ವೇತನ 2001 ರಲ್ಲಿ ದಿನಕ್ಕೆ 101 ಅಂದರೆ ತಿಂಗಳಿಗೆ 3000 ರೂ ಇತ್ತು. ಆದರೆ ವಿಪರ್ಯಾಸವೆಂದರೆ ಈಗ ಪಡೆಯುತ್ತಿರುವ 8300 ಮೌಲ್ಯವು, 3000 ಕ್ಕಿಂತ ಕಡಿಮೆಯಾಗಿದೆ ಎಂದು ಅಧ್ಯಯನಗಳು ಹೇಳುತ್ತವೆ. ಆರ್ಥಿಕತೆಯ ಪರಿಭಾಷೆಯಲ್ಲಿ ಬಳಸುವ ನಿಜದ ವೇತನ (ರಿಯಲ್ ವೇಜ್) ಅಂದಿಗಿಂತಲೂ ಇಂದು ಇಳಿಕೆಯಾಗಿದೆ. ನಿಜವಾಗಿ ದೇಶದ ಅಭಿವೃದ್ಧಿ ಎಂದರೆ ಈ ಕಾರ್ಮಿಕರ ವೇತನವು ಏರುವುದೇ ಹೊರತು, ಇಳಿಕೆಯಾಗುವುದು ಅಭಿವೃದ್ಧಿಯೇ?

2016 ರಲ್ಲಿ ಬೆಂಗಳೂರಿನ ಗಾಮೆಂಟ್ಸ್ ಮಹಿಳೆಯರ ಬಹುದೊಡ್ಡ ಹೋರಾಟ ನಡೆಯಿತು? ಹೋರಾಟ ನಡೆದುದು ಯಾತಕ್ಕಾಗಿ? ಪಿ.ಎಫ್ ಕಾಯಿದೆಗೆ ಏಕಪಕ್ಷೀಯವಾಗಿ ತಿದ್ದುಪಡಿ ತಂದು ಕಾರ್ಮಿಕರು ಕಷ್ಟ ಪಟ್ಟು ಉಳಿಸಿದ ಹಣವನ್ನು ಸರ್ಕಾರ ಕಸಿಯಲು ನೋಡಿದ್ದಕ್ಕಾಗಿ. ಅಭಿವೃದ್ಧಿಯ ಮಾಡುತ್ತೇವೆಂದು ಕೇಂದ್ರ ಸರ್ಕಾರ ಹಣವನ್ನು ಕೇಂದ್ರೀಕರಿಸಲು ಹುಡುಕಿದ ಹಲವಾರು ದಾರಿಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿರಾಕರಿಸಿದಾಗ ಅದು ಕೈ ಹಾಕಿದ್ದು ಈ ಬಡ ಕಾರ್ಮಿಕರ ಪಿ.ಎಫ್ ಹಣಕ್ಕೆ. ರೊಚ್ಚಿಗೆದ್ದ ಕಾರ್ಮಿಕರು ಬೀದಿಗಿಳಿದು ಪ್ರತಿಭಟಿಸಿದರು, ಲಾಠಿ ಏಟು ತಿಂದರು, ಹೆದರಿದ ಸರ್ಕಾರ ನಿರ್ಧಾರ ಹಿಂತೆಗೆದುಕೊಂಡಿತು. ಇದು ಅಭಿವೃದ್ಧಿಯೇ?

*(ಮುಂದಿನ ಪುಟಕ್ಕೆ)*

## ಆಹಾರ

ಉದ್ಯಮದಲ್ಲಿ ದುಡಿಯುತ್ತಿರುವುದು ಬಹುಭಾಗ ಮಹಿಳಾ ಕಾರ್ಮಿಕರು. ಇಂದಿಗೂ 10 ಕ್ಕೆ 8 ಮಹಿಳೆಯರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ, ಇದಕ್ಕೆ ಕಾರಣ ಅವರು ಉಣ್ಣುವ ಅತಿ ಸಾಧಾರಣ ಆಹಾರಗಳು. ಯಾವ ಮಲ್ಟಿ ಕ್ಯುಸೇನ್‌ಗಳು ಇದ್ದರೇನು? ದೊಡ್ಡ ದೊಡ್ಡ ಫೈವ್‌ಸ್ಟಾರ್ ಹೋಟೇಲ್‌ಗಳು ತರಾವರಿ ಆಹಾರ ಇಟ್ಟಿದ್ದರೇನು? ಬೀದಿಯ ಬದಿಯಲ್ಲಿ ತರಹೇವಾರಿ ಹಣ್ಣಿನಂಗಡಿ, ಡ್ರೈಫ್ರೂಟ್ಸ್ ಅಂಗಡಿಗಳಿದ್ದರೇನು? (ಇವೆಲ್ಲವನ್ನೂ ಏಕೆ ಹೇಳುತ್ತಿದ್ದೇನೆ ಎಂದರೆ ಇವೆಲ್ಲವೂ ಒಮ್ಮೊಮ್ಮೆ ನಮ್ಮ ದೇಶ ಎಷ್ಟು ಅಭಿವೃದ್ಧಿ ಯಾಗಿವೆ ಎಂಬ ಭ್ರಮೆ ಹುಟ್ಟಿಸುತ್ತವೆ) ಮನೆ ಮತ್ತು ಕಾರ್ಖಾನೆ ಎರಡೂ ಕಡೆ ದುಡಿಯುವ ಈ ಮಹಿಳಾ ಕಾರ್ಮಿಕರು ತಿನ್ನುವುದು ತರಕಾರಿ ಗಳಿಲ್ಲದ, ಮೊಟ್ಟೆ ಮಾಂಸಗಳಿಲ್ಲದ ಖಾಲಿ ಅನ್ನ ಸಾರು ಅಥವಾ ಚಿತ್ರಾನ್ನ ಅಷ್ಟೇ. . . ವಾರಕ್ಕೊಮ್ಮೆ ಮಾಂಸ ತಂದು ತಿನ್ನಲೂ ಅವುಗಳ ಬೆಲೆ ಗಗನಕ್ಕೇರಿವೆ. ಈ ಕಾರ್ಮಿಕರದ್ದು ಅಂದಿಗೂ ಅದೇ ಆಹಾರ, ಇಂದಿಗೂ ಅದೇ ಆಹಾರ.. . . . . ಎಲ್ಲಿದೆ ಅಭಿವೃದ್ಧಿ?



## ವಸತಿ

ಬಹುಮುಖ್ಯವಾದ ಮೂಲಭೂತ ಹಕ್ಕು ಸೂಕ್ತ ವಸತಿಯು ಈ ಕಾರ್ಮಿಕರಿಗೆ ಗಗನ ಕುಸುಮವೇ ಆಗಿದೆ. ದೊಡ್ಡ ದೊಡ್ಡ ಫ್ಲೈ ಓವರ್‌ಗಳು, ಅಂಡರ್ ಪಾಸ್‌ಗಳು, ವೈಟ್ ಟಾಪಿಂಗ್ (ಇತ್ತೀಚೆಗೆ ಬೆಂಗಳೂರಿನಲ್ಲಿ ಶುರುವಾಗಿರುವ ಒಂದು ಪಿಡುಗು) ಗಳಿಗೆ ಖರ್ಚು ಮಾಡುವ ಸಾವಿರಾರು ಕೋಟಿಗಳನ್ನು ಈ ಕಾರ್ಮಿಕರ ವಸತಿಗೆ ಖರ್ಚು ಮಾಡಿದ್ದರೆ ನೆಮ್ಮದಿಯಿಂದ ಒಂದು ಅರೆಗಳಿಗೆ ಕಾಲು ಚಾಚಿ ಕೂರುವ ವಸತಿಯನ್ನಾದರೂ ಒದಗಿಸಬಹುದಾಗಿತ್ತು. ಆದರೆ ನಮ್ಮ ಅಭಿವೃದ್ಧಿ ಮಾನದಂಡ ಏನೆಂದರೆ ಕಣ್ಣಿಗೆ ಕಾಣುವುದು ಮಾತ್ರ ಅಭಿವೃದ್ಧಿ, ಜನರು ಹೇಗಿದ್ದರೇನು, ಜನರು ಚರಂಡಿಗಳ ಪಕ್ಕದಲ್ಲಿ ಮಲಗಿದರೇನು? ಮಳೆಯಲ್ಲಿ ತೊಯ್ದರೇನು? ಬಿಸಿಲಲ್ಲಿ ಒಣಗಿದರೇನು?

ಬೆಂಗಳೂರಿನಂತಹ ಮಹಾನಗರದಲ್ಲಿ ಇಂದು ಒಂದು ಬಿಎಚ್‌ಕೆ ಗೆ ಇಂದು ಕನಿಷ್ಠ 5ರಿಂದ 6 ಸಾವಿರ ಹಣವಿದೆ. ಪಡೆಯುವ ಅತ್ಯಲ್ಪ ವೇತನದಲ್ಲಿ ಬಾಡಿಗೆಗೇ ಇಷ್ಟು ಹಣ ಹೋದರೆ ಕೇವಲ ಹೆಣ್ಣುಮಗಳೊಬ್ಬಳದೇ ಸಂಪಾದನೆಯಲ್ಲಿ ಜೀವನ ನಡೆಸುವ ಕುಟುಂಬದ ಗತಿಯೇನು? ನೀರಿನ ವ್ಯವಸ್ಥೆಯೂ ಇರದ, ಗಾಳಿ ಬೆಳಕಿಗೂ ಅವಕಾಶವಿರದ 10" x10" ಕೊಠಡಿಗಳಲ್ಲಿ ಈ ಮಹಿಳೆಯರು ತಮ್ಮ ಮಕ್ಕಳು ಹಿರಿಯರೊಡನೆ ವಾಸಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ದನಗಳ ಕೊಟ್ಟಿಗೆ, ಕುರಿಗಳ ರೊಪ್ಪ, ಕೋಳಿ ಗೂಡಿನಂತಹ ವಸತಿ ವ್ಯವಸ್ಥೆ ಈ ಕಾರ್ಮಿಕರದಾಗಿರುವಾಗ, ಅವುಗಳಿಗೂ ಇವರಿಗೂ ಏನು ವ್ಯತ್ಯಾಸ? ಎಲ್ಲಿದೆ ಅಭಿವೃದ್ಧಿ? ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆರ್ಥಿಕ ಬಲಹೀನರಿಗಾಗಿ ಮನೆಗಳನ್ನು ಕಟ್ಟಿದೆ, ಆದರೆ ಅದು ನಿಜವಾಗಿಯೂ ಅಗತ್ಯವಿರುವವರಿಗೆ ಸಿಗುತ್ತಿಲ್ಲ, ಇಲ್ಲದಿದ್ದರೆ ಅವು ಖಾಲಿ ಬಿದ್ದು ಕೊಳೆಯುತ್ತಿರಲಿಲ್ಲ. ಸರ್ಕಾರದ ಫಲಗಳು ಈ ಕಾರ್ಮಿಕರನ್ನು ತಲುಪುತ್ತಲೇ ಇಲ್ಲ.

## ಆರೋಗ್ಯ

ಮೊದಲೇ ಹೇಳಿದಂತೆ 10ಕ್ಕೆ 8 ಮಂದಿ ಮಹಿಳಾ ಕಾರ್ಮಿಕರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಕಾರಣ ಅಪೌಷ್ಟಿಕತೆ, ಅದಕ್ಕೆ ಕಾರಣ ಪೌಷ್ಟಿಕ ಆಹಾರ ತಿನ್ನುವಷ್ಟು ಹಣವಿಲ್ಲ, ಇದಕ್ಕೆ ಕಾರಣ ಅತಿ ಕಡಿಮೆ ವೇತನ.

ಇನ್ನು ಕಾಯಿಲೆಗಳಿಂದ ಬಳಲುವವರ ಬವಣೆ ಹೇಳತೀರದು. ಸರ್ಕಾರೀ ಅಥವಾ ಇ.ಎಸ್.ಐ ವ್ಯವಸ್ಥೆಯ ಮೊರೆಹೋಗುವವರನ್ನೊಮ್ಮೆ ಮಾತನಾಡಿಸಿ ಬರಬೇಕು. ಇ.ಎಸ್.ಐ ಆಸ್ಪತ್ರೆಗೆ ಬರುವವರೇ ಕಾರ್ಮಿಕರು. ಆದರಲ್ಲೂ ಇದನ್ನು ಅತಿ ಹೆಚ್ಚು ಬಳಸುವ ಅನಿವಾರ್ಯತೆ ಇರುವುದು ಗಾರ್ಮೆಂಟ್ಸ್ ಕಾರ್ಮಿಕರಿಗೆ. ಅನಾರೋಗ್ಯದಿಂದ ನರಳುತ್ತಿದ್ದರೂ, ಉದ್ದನೆಯ ಸಾಲುಗಳಲ್ಲಿ ಕಾಯಬೇಕಾದ ಪರಿಸ್ಥಿತಿ... ಒಂದು ಎಕ್ಸ್-ರೇ ತೆಗೆಸಲು, ರಕ್ತ ಪರೀಕ್ಷೆ ಮಾಡಿಸಲು, ಅದರ ರಿಪೋರ್ಟ್ ಪಡೆದುಕೊಳ್ಳಲು ಗಂಟೆಗಟ್ಟಲೇ ಕಾಯಬೇಕಾಗುವುದು. ಅನಗತ್ಯ ವಿಳಂಬವಾಗುತ್ತಿರುವುದು. ಬೇಕಾದ ಔಷಧಿಗಳು ದೊರಕ ದಿರುವುದು ಹೀಗೇ ಹತ್ತು ಹಲವಾರು ತೊಂದರೆಗಳು. ದಿನನಿತ್ಯ ಕಾರ್ಮಿಕರು ಅನುಭವಿಸುತ್ತಿರುವ ಈ ವಾಸ್ತವವನ್ನು ಮರೆಮಾಚಿ ಕೇವಲ ಭ್ರಮಾಲೋಕ ತೋರಿಸುತ್ತ ಭಾರತ ಅಭಿವೃದ್ಧಿಯಾಗಿದೆ ಎಂದರೆ ಅದು ಸುಳ್ಳು, ಒಂದು ದೇಶದ ಅಭಿವೃದ್ಧಿಯನ್ನು ಅಳೆಯಬೇಕಾದರೆ ಅದರ ಪ್ರಜೆಗಳ ದೈಹಿಕ ಮಾನಸಿಕ ಆರೋಗ್ಯದ ಮಟ್ಟವನ್ನೂ ಸಹ ಗಣನೆಗೆ ತೆಗೆದು ಕೊಳ್ಳಬೇಕು.

## ಸಾರಿಗೆ

ಅತಿ ಮೂಲಭೂತ ಆವಶ್ಯಕತೆ ಗಳಲ್ಲಿ ಇದೂ ಒಂದು. ಆದರೆ ವಿಪರ್ಯಾಸವೆಂದರೆ ಬೆಂಗಳೂರಿನ ಸಾರ್ವಜನಿಕ ಸಾರಿಗೆ ಯಾದ ಬಿ.ಎಂ.ಟಿ.ಸಿಯಲ್ಲಿ ಗಾರ್ಮೆಂಟ್ಸ್ ಕಾರ್ಮಿಕರು ಓಡಾಡುವುದಿಲ್ಲ, ಏಕೆಂದರೆ ಅದರ ಬೆಲೆ ಅವರ ಕೈಗೆಟುಕುವಂತಿಲ್ಲ. ಪರಿಣಾಮವಾಗಿ ಕಾರ್ಖಾನೆಯ ಆಸು ಪಾಸಿನಲ್ಲೇ ಮನೆ ಮಾಡಿಕೊಂಡು ಅರ್ಧ ಗಂಟೆಗೂ ಹೆಚ್ಚು ಕಾಲ ನಡೆದು ಹೋಗುತ್ತಾರೆ ಮಹಿಳಾ ಕಾರ್ಮಿಕರು. ಮನೆ ಹತ್ತಿರವಿದೆ ಎಂಬ ಕಾರಣಕ್ಕೆ ಕೆಲಸದ ಸ್ಥಳದಲ್ಲಿ ಏನೇ ಅನ್ಯಾಯ ನಡೆದರೂ ಸಹ ಕೆಲಸ ಬಿಡದೇ ಅಲ್ಲೇ "ಹೊಂದಿಕೊಂಡು" ಕೆಲಸ ಮಾಡುತ್ತಿರುವವರೂ ಇದ್ದಾರೆ.

ಎರಡನೆಯದಾಗಿ ಕಾರ್ಖಾನೆಗಳು ಬಸ್ ವ್ಯವಸ್ಥೆಯನ್ನು ಒದಗಿಸಿವೆ. ಆದರೆ ಇವುಗಳಲ್ಲಿ ಕಾರ್ಮಿಕರು ಗೌರವಯುತವಾಗಿ, ಆರಾಮವಾಗಿ ಕುಳಿತುಕೊಂಡು ಪ್ರಯಾಣಿಸುವಂತಿಲ್ಲ, 30 ಜನರ ಸಾಮರ್ಥ್ಯದ ಬಸ್ಸಿನಲ್ಲಿ 60 ಜನರನ್ನು ಕುರಿಗಳಂತೆ ತುಂಬಿ ಕರೆತರುತ್ತಾರೆ. ಎಷ್ಟೋ ಬಾರಿ ಸೀಟು ಹಿಡಿಯಲು ನಾ ಮೊದಲು ತಾಮೊದಲು ಎಂಬ ಗಲಾಟೆಗಳಾಗಿ ಕಾರ್ಮಿಕರ ನಡುವಿನ ಸಂಬಂಧ ಹಾಳಾಗಿದೆ. ಕಿಕ್ಕಿರಿದು ತುಂಬಿದ ಬಸ್ ಅಪಘಾತಕ್ಕೊಳಗಾಗಿದೆ.

ಮೂರನೆಯದಾಗಿ ಗ್ರಾಮಾಂತರ ಪ್ರದೇಶದ ಸಾರಿಗೆ ವ್ಯವಸ್ಥೆ. ಬೆಂಗಳೂರು ಹೊರತು ಪಡಿಸಿ ಇತರೆ ಜಿಲ್ಲೆಗಳ ಗಾರ್ಮೆಂಟ್ಸ್ ಕಾರ್ಖಾನೆಗಳಿಗೆ ಹತ್ತಿರದ ಹಳ್ಳಿಗಳಿಂದ ಕಾರ್ಮಿಕರು ಬರುತ್ತಾರೆ. ಈ ಕಾರ್ಖಾನೆಗಳು ಸಾರಿಗೆ ವ್ಯವಸ್ಥೆ ಒದಗಿಸುವುದಿಲ್ಲ, ಅಲ್ಲಿನ ಗ್ರಾಮಾಂತರ ಸಾರ್ವಜನಿಕ ಸಾರಿಗೆಯೂ ಉತ್ತಮವಾಗಿಲ್ಲ, ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಕೇವಲ ಹೆದ್ದಾರಿಗಳಲ್ಲಿ ಸಂಚರಿಸುತ್ತವೆ, ಜೊತೆಗೆ ಅದರ ಬೆಲೆಯೂ ಕೈಗೆಟುಕದ್ದು. ಈ ಕಾರಣಕ್ಕೆ ಈ ಮಹಿಳಾ ಕಾರ್ಮಿಕರು ಗೂಡ್ಸ್ ಟೆಂಪೋಗಳಲ್ಲಿ ತಿಂಗಳಿಗೆ 1500ರ ವರೆಗೂ ಖರ್ಚು ಮಾಡಿ ಕೆಲಸಕ್ಕೆ ಓಡಾಡುತ್ತಾರೆ. ಈ ಅಸುರಕ್ಷಿತ, ಹೊಣೆಗಾರಿಕೆಯಿಲ್ಲದ ಸಾರಿಗೆಯಲ್ಲಿ ಜೀವ ಕೈಯಲ್ಲಿ ಹಿಡಿದು ಮಾಡಬೇಕಾದ ಪ್ರಯಾಣದಲ್ಲಿ ಕೆಲವೊಮ್ಮೆ ಅಪಘಾತಗಳಾಗಿ ಶಾಶ್ವತವಾಗಿ ಅಂಗಾಂಗಗಳನ್ನು ಕಳೆದುಕೊಂಡಿದ್ದಾರೆ.

ಸರ್ಕಾರಗಳು ಗ್ರಾಮಾಂತರ ಪ್ರದೇಶದಲ್ಲಿ ಕಾರ್ಖಾನೆ ತೆರೆಯುವಂತೆ ಮಾಲೀಕರನ್ನು ಪ್ರೋತ್ಸಾಹಿಸುತ್ತಾರೆ, ಅದನ್ನೇ ಉದ್ಯೋಗ ಸೃಷ್ಟಿ, ಅಭಿವೃದ್ಧಿ ಎಂದು ಬಿಂಬಿಸುತ್ತಾರೆ, ಆದರೆ ಅಲ್ಲಿನ ಕಾರ್ಮಿಕರಿಗೆ ಒಂದು ಸೂಕ್ತ ಸಾರಿಗೆಗೆ ವ್ಯವಸ್ಥೆ ಮಾಡುವುದಿಲ್ಲ.

ಬೆಂಗಳೂರಿನ ಮಟ್ಟಕ್ಕೆ ತೆಗೆದುಕೊಂಡರೆ ಬಿ.ಎಂ.ಟಿ.ಸಿ ವ್ಯವಸ್ಥೆ ಮತ್ತು ಈಗ ಮಹಾನಗರದ ಗರಿ ಹೆಚ್ಚಿಸಿರುವ ಮೆಟ್ರೋ ಇವೆಲ್ಲವೂ ಕಾರ್ಮಿಕರ ಉಪಯೋಗಕ್ಕಲ್ಲ, ಅದೆಲ್ಲವೂ ಹೊರಜಗತ್ತಿಗೆ ತೋರಿಸುವ 'ಅಭಿವೃದ್ಧಿ' ಯ



Scanned with OKEN Scanner

ಮಾದರಿ ಅಷ್ಟೇ. ಆದರೆ ದೇಶದ ಬೆನ್ನೆಲುಬಾಗಿರುವ, ತಮ್ಮ ಬೆವರಿನಿಂದ ದೇಶವನ್ನು ಕಟ್ಟುವ, ದುಡಿಮೆಯನ್ನೇ ನಂಬಿ ಬದುಕುವ ಕಾರ್ಮಿಕರ ಅಭಿವೃದ್ಧಿ ಎಲ್ಲಿ? ಅವರ ಜೀವನಮಟ್ಟದಲ್ಲಿ ಸ್ವಲ್ಪ ಮಟ್ಟಿಗಾದರೂ ಅಭಿವೃದ್ಧಿ ಕಾಣಬೇಕಲ್ಲವೇ?

ಅಭಿವೃದ್ಧಿ ಯಾರಿಗಾಗಿದೆ? ಲಾಭ ಮಾಡುತ್ತಿರುವ ಬ್ರಾಂಡ್‌ಗಳು ದಿನೇ ದಿನೇ ಅಭಿವೃದ್ಧಿ ಹೊಂದುತ್ತಿವೆ. ಕೇವಲ ಒಂದು ಕಾರ್ಖಾನೆಯಿಂದ ಪ್ರಾರಂಭಿಸಿ ಈಗ 50ಕ್ಕೂ ಹೆಚ್ಚು ಕಾರ್ಖಾನೆ ಹೂಡಿರುವ, ಕಾರ್ಖಾನೆಗೆಂದು ಸ್ವಂತ ಜಮೀನು ಖರೀದಿಸುತ್ತಿರುವ ಗಾರ್ಮೆಂಟ್ಸ್ ಮಾಲೀಕರು ಅಭಿವೃದ್ಧಿ ಹೊಂದುತ್ತಿದ್ದಾರೆ.

ದೇಶ ಎಂದರೆ ಬರೀ ಭೂ ಪ್ರದೇಶ, ಗಡಿ ಮಾತ್ರವಲ್ಲ, ಅದರೊಳಗೆ ವಾಸಿಸುವ ಜನರು. ಅಭಿವೃದ್ಧಿ ಎಂದರೆ ದೊಡ್ಡ ದೊಡ್ಡ ಕಟ್ಟಡಗಳಲ್ಲ, ಮೆಟ್ರೋ ಮಾನೋ ರೈಲುಗಳಲ್ಲ, ಐಷಾರಾಮೀ ಸೌಕರ್ಯಗಳಲ್ಲ, ದೊಡ್ಡ ದೊಡ್ಡ ಕಾರುಗಳು, ವಿಶಾಲ ಸಿಮೆಂಟ್ ರಸ್ತೆಗಳು, ಏರುತ್ತಿರುವ ಶೇರು ಮಾರುಕಟ್ಟೆ, ಅತ್ಯಂತ ಶ್ರೀಮಂತ ಉದ್ಯಮಿಗಳು ಮಾತ್ರವಲ್ಲ, ದೇಶವನ್ನು ಕಟ್ಟುವ ಸಾಮಾನ್ಯ ಜನರ ಬದುಕು ಎಷ್ಟು ಹಸನಾಗಿದೆ, ಎಷ್ಟು ಸುಖಕರವಾಗಿದೆ ಎಂಬುದರ ಮೇಲೆ ಅಭಿವೃದ್ಧಿಯನ್ನು ಅಳೆಯಬೇಕು. ಅದೇ ನಿಜವಾದ ಅಭಿವೃದ್ಧಿ.

■ ಪ್ರತಿಭಾ. ಆರ್

□

**ಕಾರ್ಮಿಕರಲ್ಲಿ ಮನವಿ**

ಆತ್ಮೀಯರೇ, ಇದು ನಿಮ್ಮ ಪತ್ರಿಕೆ ನೀವು ಓದಿದರೇ ಈ ಪತ್ರಿಕೆ ಮುಂದುವರೆಯಲು ಸಾಧ್ಯವಾಗುತ್ತದೆ. ಕಾರ್ಮಿಕರಿಗಾಗಿ ಇರುವ ಪತ್ರಿಕೆಯನ್ನು ಕಾರ್ಮಿಕರೇ ಉಳಿಸಬೇಕು. ಆದ್ದರಿಂದ ದಯವಿಟ್ಟು ದುಡ್ಡುಕೊಟ್ಟು ಖರೀದಿಸಬೇಕೆಂದು ಈ ಮೂಲಕ ತಮ್ಮನ್ನು ಕೇಳಿಕೊಳ್ಳುತ್ತಿದ್ದೇವೆ.

# ಅಸುರಕ್ಷಿತ ಪ್ರಯಾಣ: ಗಾರ್ಮೆಂಟ್ಸ್ ಕಾರ್ಮಿಕರಿಗೆ ಅನಿವಾರ್ಯವೆ?

ದೇಶದ ಕಾರ್ಮಿಕರಿಗೆ/ರೈತರಿಗೆ ಉತ್ತಮ ವೇತನ ಇಲ್ಲದೆ ಇರುವುದರಿಂದ ಕಾರ್ಮಿಕರು ಅವರ ಖರ್ಚುಗಳನ್ನು ಆದಷ್ಟೂ ಕಡಿಮೆ ಮಾಡಲು ಪ್ರಯತ್ನಿಸುತ್ತಿರುತ್ತಾರೆ. ದೊರಕುವ ಕಡಿಮೆ ವೇತನದಲ್ಲಿ ಆಹಾರ, ಆರೋಗ್ಯ ಶಿಕ್ಷಣ, ಮನರಂಜನೆ ಎಲ್ಲದರಲ್ಲೂ ಖರ್ಚು ಕಡಿಮೆ ಮಾಡಲೇ ಬೇಕಾಗುತ್ತದೆ. ಇದರಲ್ಲಿ ಮುಖ್ಯವಾದದ್ದು ಸಾರಿಗೆ ವೆಚ್ಚ. ಪ್ರಸ್ತುತ ದಿನಗಳಲ್ಲಿ ಸಾರಿಗೆ ವೆಚ್ಚವು ಅಧಿಕವಾಗಿರುತ್ತದೆ. ಕರ್ನಾಟಕದಲ್ಲಿ ಸಾರ್ವಜನಿಕ ಸಾರಿಗೆ ವೆಚ್ಚವು ಅತ್ಯಧಿಕವಾಗಿದೆ. ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ಕಂಪನಿಗಳುಇರುವ ಜಾಗಗಳಲ್ಲಿ ಕಾರ್ಮಿಕರು ವಾಸ ಮಾಡಲು ಮನೆಗಳು ಸಿಗುವುದು ಬಹಳ ಕಷ್ಟ. ಕಾರ್ಮಿಕರು ವಾಸಿಸುವ ಜಾಗದಿಂದ ಕೆಲಸದ ಸ್ಥಳಕ್ಕೆ ಹತ್ತಾರು ಕಿ.ಮೀ ಗಳನ್ನು ಪ್ರಯಾಣಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸಾರಿಗೆ ಸಂಸ್ಥೆ ಬಸ್‌ಗಳಲ್ಲಿ ಪ್ರಯಾಣಿಸುವುದು ದುಬಾರಿ ವೆಚ್ಚವಾಗುತ್ತದೆ. ಕಾರ್ಮಿಕರು ಈ ದುಬಾರಿ ಸಾರಿಗೆ ಖರ್ಚನ್ನು ಭರಿಸಲಾಗದೆ ಅನಧಿಕೃತ ಖಾಸಗಿ ಸಾರಿಗೆ ವ್ಯವಸ್ಥೆಗಳನ್ನು ಬಳಸಿ ಕೊಳ್ಳುತ್ತಾರೆ. ಇದರಿಂದ ಅವರಿಗೆ ಸ್ವಲ್ಪ ಹಣ ಉಳಿತಾಯವಾದರೂ ಸುರಕ್ಷತೆಯ ದೃಷ್ಟಿಯಿಂದ ಬಹಳಷ್ಟು ತೊಂದರೆಗಳಿಗೆ ಸಿಕ್ಕಿಕೊಳ್ಳುತ್ತಾರೆ. ಇಂತಹ ಅನಧಿಕೃತ ಸಾರಿಗೆ ವ್ಯವಸ್ಥೆ ಬಳಸುವುದರಿಂದ ಮಹಿಳಾ ಕಾರ್ಮಿಕರಿಗೆ ದೊಡ್ಡ ಮಟ್ಟದ ತೊಂದರೆಗಳು ಉಂಟಾಗುತ್ತವೆ. ಅಪಘಾತಗಳಲ್ಲದೆ ಅತ್ಯಾಚಾರದಂತಹ ಘಟನೆಗಳು ಸಹ ನಡೆದಿರುವ ಉದಾಹರಣೆಗಳು ಇವೆ. ಅಪಘಾತಗಳಿಂದ ಹಲವಾರು ಕಾರ್ಮಿಕರು ಪ್ರಾಣವನ್ನು ಕಳೆದುಕೊಂಡಿದ್ದಾರೆ ಮತ್ತು ಶಾಶ್ವತ ಅಂಗವಿಕಲತೆಯಿಂದ ಜೀವಂತ ಶವವಾಗಿದ್ದಾರೆ. ಸುರಕ್ಷಿತ ಸಾರಿಗೆ ವ್ಯವಸ್ಥೆಗೆ ಸಂಬಂಧ ಪಟ್ಟಂತೆ ಹಲವಾರು ಕಾನೂನುಗಳು ಇವೆ. ಆದರೆ ಕಾನೂನುಗಳು ಪರಿಣಾಮ ಕಾರಿಯಾಗಿ ಜಾರಿಯಾಗದೆ ಇರುವುದರಿಂದ ಇಂತಹ ಅತ್ಯಾಚಾರ ಮತ್ತು ಅಪಘಾತದಂತಹ ದುರ್ಘಟನೆಗಳು ಘಟಿಸುತ್ತಿವೆ. ಅನಧಿಕೃತ ಖಾಸಗಿ ಸಾರಿಗೆ ವ್ಯವಸ್ಥೆಯನ್ನು ಬಳಸುವವರಲ್ಲಿ ಮುಖ್ಯವಾಗಿ ಗಾರ್ಮೆಂಟ್ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಭದ್ರತಾ ಸಿಬ್ಬಂದಿಗಳು ಮತ್ತು ದಿನಗೂಲಿ ಕಾರ್ಮಿಕರಾಗಿದ್ದಾರೆ. ತಾವು ತೆಗೆದುಕೊಳ್ಳುವ ವೇತನದಲ್ಲಿ ಬೆಂಗಳೂರು ನಗರದ ಕಾರ್ಮಿಕರು ಶೇ20ರಿಂದ 25%ರಷ್ಟು ಸಾರಿಗೆಗಾಗಿ ಖರ್ಚು ಮಾಡುತ್ತಿದ್ದಾರೆ.

ಗಾರ್ಮೆಂಟ್ ಕಾರ್ಖಾನೆಗಳು ಗ್ರಾಮಾಂತರ ಪ್ರದೇಶದಲ್ಲಿ ನೆಲೆಗೊಂಡ ನಂತರ, ಅಲ್ಲಿನ ಕಾರ್ಮಿಕರು ಪ್ರತಿದಿನ 25ರಿಂದ 30 ಕಿ.ಮೀ ದೂರದ



ಹಳ್ಳಿಗಳಿಂದ ಕಾರ್ಖಾನೆಗೆ ಪ್ರಯಾಣಿಸುತ್ತಿದ್ದಾರೆ. ಅವರು ಸಾರ್ವಜನಿಕ ಸಾರಿಗೆ ಅಂದರೆ ಕೆ.ಎಸ್.ಆರ್.ಟಿ.ಸಿ.ಯ ದರವನ್ನು ಪಾವತಿಸಲು ಸಾಧ್ಯವೇ ಇಲ್ಲ. ಹೀಗಾಗಿ ಈ ಕಾರ್ಮಿಕರು ಸರಕು ಸಾಗಣೆ ವಾಹನಗಳಲ್ಲಿ (ಟಾಟಾ ಏಸ್, ಟೆಂಪೋ) ಪ್ರಯಾಣಿಸುತ್ತಿದ್ದಾರೆ. ಇದು ಕಾನೂನು ಬಾಹಿರವಾಗಿದ್ದರೂ ಸಂಬಂಧಪಟ್ಟ ಇಲಾಖೆಗಳು ಕಣ್ಣು ಮುಚ್ಚಿ ಕುಳಿತಿವೆ. ಇಂತಹ ಅನಧಿಕೃತ ಸಾರಿಗೆ ವ್ಯವಸ್ಥೆಯನ್ನು ಕೊನೆಗಾಣಿಸುವ ಸಮಯ ಹತ್ತಿರ ಬಂದಿರುವಂತೆ ಕಾಣುತ್ತಿದೆ.

ಕಾರ್ಮಿಕರ ಇಂತಹ ದಯನೀಯ, ಅಸುರಕ್ಷಿತ ಸಾರಿಗೆ ವ್ಯವಸ್ಥೆಯನ್ನು ಕೊನೆಗಾಣಿಸಲೆಬಂತೆ ಕರ್ನಾಟಕ ಕಾನೂನು ಸೇವೆಗಳ ಪ್ರಾಧಿಕಾರವು ಕರ್ನಾಟಕದ ಉಚ್ಚನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಶಕ್ತಿ ಅರ್ಜಿಯನ್ನು (ಅರ್ಜಿಸಂ. 12181/2019 ದಿನಾಂಕ 16.03.2019) ಸಲ್ಲಿಸಿತ್ತು. ಇದರ ಪರಿಣಾಮವಾಗಿ ಉಚ್ಚನ್ಯಾಯಾಲಯವು ಇಂತಹ ಅನಧಿಕೃತ ಸಾರಿಗೆ ವ್ಯವಸ್ಥೆಯನ್ನು ನಿಲ್ಲಿಸಲು ಮತ್ತು ಕಾರ್ಮಿಕರಿಗೆ ರಿಯಾಯಿತಿ ದರದಲ್ಲಿ ಸುರಕ್ಷಿತಸಾರಿಗೆ ವ್ಯವಸ್ಥೆಯನ್ನು ಒದಗಿಸಬೇಕೆಂದು ನಿರ್ದೇಶನ ನೀಡಿ, ಈ ಬಗ್ಗೆ ಸರ್ಕಾರವು ತನ್ನ ಕಾರ್ಯಯೋಜನೆಯನ್ನು ನ್ಯಾಯಾಲಯಕ್ಕೆ ತಿಳಿಸಬೇಕೆಂದು ತಿಳಿಸಿದೆ.

ಸರ್ಕಾರಗಳು ಬಂಡವಾಳ ಹೂಡಿಕೆಯನ್ನು ಸೆಳೆಯಲು, ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಸಲು ಮಾಲೀಕರಿಗೆ

*(ಮುಂದಿನ ಪುಟಕ್ಕೆ)*

ಪ್ರೋತ್ಸಾಹಿಸಿ ಅಲ್ಲಿ ಕಾರ್ಖಾನೆ ತೆರೆಯಲು ಹಲವಾರು ರೀತಿಯ ಸಬ್ಸಿಡಿ, ರಿಯಾಯತಿ ಮತ್ತು ಆರ್ಥಿಕ ಬೆಂಬಲವನ್ನೂ ನೀಡುತ್ತವೆ. ಆದರೆ ಆ ಕಾರ್ಖಾನೆಗೆ ಪ್ರಯಾಣಿಸಲು ಕಾರ್ಮಿಕರಿಗೆ ಯಾವುದೇ ಸುರಕ್ಷಿತ ವ್ಯವಸ್ಥೆ ಮಾಡುವುದಿಲ್ಲ. ಆಡಳಿತ ವರ್ಗಗಳೂ ಕಾರ್ಮಿಕರ ಕಾಳಜಿ ಇಲ್ಲದೆ "ಕೆಲಸ ಬೇಕೆಂದರೆ ಹೇಗೋ ಬರುತ್ತಾರೆ" ಎಂಬ ಧೋರಣೆ ಅನುಸರಿಸುತ್ತವೆ.

ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ನ್ಯಾಯಾಲಯದ ಈ ಆದೇಶವನ್ನು ಗಂಭೀರವಾಗಿ ಪರಿಗಣಿಸಿ ಈ ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಕಾರ್ಮಿಕರ ಬಗ್ಗೆ ಕಾಳಜಿ ವಹಿಸಿ ಅವರಿಗೆ ಸುರಕ್ಷಿತ ಸಾರಿಗೆ ವ್ಯವಸ್ಥೆ ಒದಗಿಸಲು ಮುಂದಾಗಬೇಕೆಂದು GATWU ಮತ್ತು ಗಾ.ಮ.ಕಾ ಮುನ್ನಡೆಯು ಆಗ್ರಹಿಸುತ್ತಿವೆ.

GATWU ಈಗಾಗಲೇ ಕಾರ್ಯ ಪ್ರವೃತ್ತವಾಗಿ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಇಸಿಸಿ-2 ಮತ್ತು ಮದ್ದೂರಿನ ಶಾಹಿ ಎಕ್ಸ್‌ಪೋರ್ಟ್ಸ್ ಕಂಪನಿಗಳಿಗೆ ಸಾರಿಗೆ ವ್ಯವಸ್ಥೆಯನ್ನು ರಿಯಾಯಿತಿ ದರದಲ್ಲಿ ಒದಗಿಸಬೇಕೆಂದು ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು ಮತ್ತು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ವ್ಯವಸ್ಥಾಪಕರಿಗೆ ಮನವಿಯನ್ನು ಮಾಡಿದೆ. ಇದಕ್ಕಾಗಿ ಸರ್ಕಾರವು 2019-20 ರ ಆಯವ್ಯಯದಲ್ಲಿ ಗಾರ್ಮೆಂಟ್ಸ್ ಕಾರ್ಮಿಕರಿಗಾಗಿ ಮೀಸಲಿರಿಸಿರುವ ಹಣವನ್ನು ಉಪಯೋಗಿಸಬೇಕೆಂದು ಜವಳಿ ಖಾತೆಯ ಆಯುಕ್ತರಿಗೆ ಮನವಿಯನ್ನು ಮಾಡಿದೆ. ಶೀಘ್ರದಲ್ಲೇ ಈ ವ್ಯವಸ್ಥೆಯು ಅನುಷ್ಠಾನಗೊಳ್ಳುವ ಸಾಧ್ಯತೆ ಇದೆ.

■ ಜಯರಾಮ್ ಕೆ. ಆರ್

## 2018-19ರ ಸಾಲಿನ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದ ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳಿಗೆ GATWU ಮತ್ತು ಗಾ.ಮ.ಕಾ ಮುನ್ನಡೆಯು ಶುಭಾಶಯ ಕೋರುತ್ತದೆ.



ವರ್ಷಿಣಿ. ವಿ
ಪಡೆದ ಅಂಕ : 93%
ಎವೆರಿ ಡೆನ್ನಿಸನ್



ತನು ಶ್ರೀ
ತಾಯಿ : ಸುಚಿತ್ರ
ಪಡೆದ ಅಂಕ : 92%
ಶಾಹಿ ಎಕ್ಸ್‌ಪೋರ್ಟ್ ಪ್ರೈ ಲಿ.-26



ರಘು ಎಸ್
ತಾಯಿ : ಚಂದ್ರಿಕ
ಪಡೆದ ಅಂಕ : 78%
ಇಸಿಸಿ-2



ಚಂದ್ರಕಲಾ ಪಿ. ಜೆ
ತಾಯಿ : ಭಾಗ್ಯ
ಪಡೆದ ಅಂಕ : 67%
ಇಸಿಸಿ-2



ಸತೀಶ್ ಎಮ್
ತಂದೆ : ಮಲ್ಲಿಕಾರ್ಜುನ ಸ್ವಾಮಿ
ಪಡೆದ ಅಂಕ : 83%
ಅರವಿಂದ್ ಲೈಫ್ ಸ್ಟೈಲ್



ರಂಜಿತ ಎಮ್
ತಾಯಿ : ಚಿನ್ನಾಂಬಿಕ
ಪಡೆದ ಅಂಕ : 77%
ಇಸಿಸಿ-2



ಅಪೂರ್ವ ಆರ್ ಎಮ್
ತಾಯಿ : ಸವಿತ
ಪಡೆದ ಅಂಕ : 74%
ಇಸಿಸಿ-2



ಪ್ರಸಾದ್ ಗೌಡ
ತಂದೆ : ಬಸವರಾಜ ಎಮ್
ಪಡೆದ ಅಂಕ : 63%
ಅರವಿಂದ್ ಲೈಫ್ ಸ್ಟೈಲ್



ಹರ್ಷಿತ ಎಮ್
ಪಡೆದ ಅಂಕ : 76%
ಎವೆರಿ ಡೆನ್ನಿಸನ್



ನಿತೇಶ್ ಎ.ಎಮ್
ತಾಯಿ : ಸರಸ್ವತಿ
ಪಡೆದ ಅಂಕ : 76%
ಇಸಿಸಿ-2



ಸುಷ್ಮಿತ ಎಮ್
ತಾಯಿ : ಪುಷ್ಪ
ಪಡೆದ ಅಂಕ : 56%
ಶಾಹಿ ಎಕ್ಸ್‌ಪೋರ್ಟ್ ಪ್ರೈ ಲಿ.-46



ಮದನ್ ಆರ್
ತಾಯಿ : ನಾಗರತ್ನ
ಪಡೆದ ಅಂಕ : 88%
ಶಾಹಿ ಎಕ್ಸ್‌ಪೋರ್ಟ್ ಪ್ರೈ ಲಿ.-46



ತೇಜಸ್ವಿನಿ. ಪಿ
ಪಡೆದ ಅಂಕ : 84%
ಇಸಿಸಿ-2



ಚಂದನ ಸಿ. ಪಿ
ತಾಯಿ : ಮೀನಾಕ್ಷಿ
ಪಡೆದ ಅಂಕ : 667%



ಸಂಗೀತ ಎಮ್. ಎಸ್
ತಾಯಿ : ಸರಸ್ವತಿ
ಪಡೆದ ಅಂಕ : 76%
ಶಾಹಿ ಎಕ್ಸ್‌ಪೋರ್ಟ್ ಪ್ರೈ ಲಿ.-46



ರಾಜೇಶ್ ಎಸ್
ತಾಯಿ : ರೇಣುಕ
ಪಡೆದ ಅಂಕ : 50%
ಶಾಹಿ ಎಕ್ಸ್‌ಪೋರ್ಟ್ ಪ್ರೈ ಲಿ.-46



ಪುನೀತ್ ಎನ್
ತಾಯಿ : ಜಯಮ್ಮ ಎಸ್
ಪಡೆದ ಅಂಕ : 80%
ಶಾಹಿ ಎಕ್ಸ್‌ಪೋರ್ಟ್ ಪ್ರೈ ಲಿ.-46



ನವೀನ್ ಎಮ್
ತಾಯಿ : ಪದ್ಮಾವತಮ್ಮ
ಪಡೆದ ಅಂಕ : 60%
ಟೆಕ್ಸ್‌ಪೋರ್ಟ್ ಇಂಡಸ್ಟ್ರೀಸ್

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

■ **ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**

ನಂ. 220, ಎರಡನೇ ಮಹಡಿ, ಚೆನ್ನಕೇಶವ ನಿಲಯ,
ಗಣೇಶ ದೇವಸ್ಥಾನದ ಹತ್ತಿರ, ಪಂತರಪಾಳ್ಯ, ನಾಯಂಡಹಳ್ಳಿ,
ಮೈಸೂರು ರಸ್ತೆ, ಬೆಂಗಳೂರು-560 039.

■ **ಕರ್ನಾಟಕ ಮಹಿಳಾ ಆಯೋಗ**

ನಂ. 105, ಮೊದಲನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ,
ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009
ದೂ: 22216485

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ನಂ. 17/1, ಹೊಸ ಗುಡ್ಡದಹಳ್ಳಿ ಬಸ್‌ಸ್ಟಾಪ್, ಬಾಲಾಜಿ ಕಲ್ಯಾಣ ಮಂಟಪ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು - 560 026. ದೂ: 080-26745242 । ಮುದ್ರಣ : ಇಳಾ ಮುದ್ರಣ, ಬೆಂಗಳೂರು - 2560 026. ದೂ. : 26757159

Scanned with OKEN Scanner